# ಹಂಪಿ ಟೈಮ್ಸ್
HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY






ಸಂಪುಟ:01 Volume:01 • ಸಂಚಿಕೆ:271 Issue:271 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 24.03.2024 • ಭಾನುವಾರ Sunday • ಪುಟ:04 Page:04 • ಬೆಲೆ:2 Rs:2





## ಮೈಕ್ರೋ ನ್ಯೂಸ್

### ಶಾಸ್ತ್ರೀಯ ಸಂಗೀತ, ಸನಾತನಿಗಳ ಗುತ್ತಿಗೆಯಲ್ಲ- ಸಮುದಾಯ, ಹೊಸಪೇಟೆ.

**ಹಂಪಿ ಟೈಮ್ಸ್ ಹೊಸಪೇಟೆ**

ತಮಿಳುನಾಡಿನಲ್ಲಿ ಕರ್ನಾಟಕ ಸಂಗೀತದ ಪ್ರಖ್ಯಾತ ಕಲಾವಿದರಾದ ಟಿ ಎಂ ಕ್ರಿಷ್ಣ ಅವರಿಗೆ ಸಂಗೀತ ಕಲಾನಿಧಿ ಪ್ರಶಸ್ತಿ ನೀಡಿರುವುದನ್ನು ವಿರೋಧಿಸಿರುವ ಬಿಜೆಪಿ ನಡೆಯನ್ನು ಸಮುದಾಯ-ಕರ್ನಾಟಕ ಹೊಸಪೇಟೆ ತೀವ್ರವಾಗಿ ಖಂಡಿಸಿದೆ. ಅಲ್ಲದೇ ಕಲಾವಿದರಾದ ರಜನಿ- ಗಾಯತ್ರಿ ಯವರು ಈ ವರ್ಷದ ಡಿಸೆಂಬರ್ ನಲ್ಲಿ ನಡೆಯಲಿರುವ ಕಾರ್ಯಕ್ರಮವನ್ನು ಬಹಿಷ್ಕರಿಸಿರುವುದು ಸರಿಯಲ್ಲ ಎಂದಿದೆ.

ಕರ್ನಾಟಕ ಸಂಗೀತ ಕೇವಲ ಒಂದು ಸಮುದಾಯದ ಸ್ವತ್ತಾಗಿ ಪರಿಣಮಿಸಬೇಕೆ ಅಥವಾ ಪ್ರಜಾಪ್ರಭುತ್ವೀಕರಣ ಆಗಬೇಕೋ ಎಂಬುದರ ಸುತ್ತ ಹೆಣೆದುಕೊಂಡಿರುವ ಈ ವಿವಾದದಲ್ಲಿ ಬಿಜೆಪಿ ಕೇವಲ ಒಂದು ಸಮುದಾಯದ ಪರವಾಗಿ ನಿಂತಿರುವುದು ನಿಜಕ್ಕೂ ಆಘಾತಕಾರಿ ಸಂಗತಿಯಾಗಿದೆ. ಸಂಗೀತದ ಕುರಿತಾಗಿ ವಿರೋಧಿಗಳ ಆತಂಕ ಎಂದರೆ, ಟಿ ಎಂ ಕ್ರಿಷ್ಣ ಅವರು ಶಾಸ್ತ್ರೀಯ ಸಂಗೀತವನ್ನು ಹಿಂದೂ ದೇವಸ್ಥಾನಗಳ ಪರಂಪರೆಗೆ ಅಧೀನದಲ್ಲಿರಿಸುವುದಕ್ಕೆ ಬದಲಾಗಿ ಅನ್ಯ ವಿಚಾರಗಳನ್ನು ಸೇರಿಸುತ್ತಿರುವುದರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ಅವರು ನಷ್ಟವುಂಟು ಮಾಡುತ್ತಿದ್ದಾರೆ ಮತ್ತು ಈ ಮೂಲಕ ವೈಚಾರಿಕ ರಾಜಕಾರಣ ಮಾಡುತ್ತಿದ್ದಾರೆಂಬುದಾಗಿದೆ. ಟಿ ಎಂ ಕ್ರಿಷ್ಣ ರವರ ಕರ್ನಾಟಕ ಶಾಸ್ತ್ರೀಯ ಸಂಗೀತದ ಕುರಿತಾದ ನಿಲುವನ್ನು ಸಮುದಾಯ ಸಂಘಟನೆ ಗೌರವಿಸುತ್ತದೆ, ಬೆಂಬಲಿಸುತ್ತದೆ ಮತ್ತು ಕರ್ನಾಟಕದಲ್ಲಿಯೂ ಅವರ ಪ್ರಯತ್ನಗಳನ್ನು ಮುಂದುವರಿಸುತ್ತದೆ ಎಂದು ತಿಳಿಸುತ್ತದೆ ಎಂದು ಮುಖಂಡರಾದ ಎ ಕರುಣಾನಿಧಿ, ಕಲಾವಿದರಾದ ನಾಗರಾಜ ಪತ್ತಾರ, ಉಮಾಮಹೇಶ್ವರ, ಮೊದಲಾದವರು ತಿಳಿಸಿದ್ದಾರೆ.


Universal Financial Services College Road Parwaz Plaza 2nd Floor Hospet - 583201

WANTED Tele Callers

Female Candidates Only

Freshers Or Experienced

Qualification: PUC, any DEGREE

Preffered Local Hospet Candidates Only.

Working Location-Hosapete

Communication skills required

Contact: 98861 50774



ಇಂಡಸ್ಟ್ರೀಯಲ್ ಶೆಡ್ ಸೈಟ್ ಮಾರಾಟಕ್ಕಿದೆ

ಹೊಸಪೇಟೆ ನಗರದ ಟಿ.ಬಿ.ಡ್ಯಾಂ ರಸ್ತೆ, ಶ್ರೀ ಸಾಯಿಬಾಬಾ ದೇವಸ್ಥಾನದ ಎದುರಿನ ಕೆಎಸ್ಎಸ್ಐಡಿಸಿ (KSSIDC) ಇಂಡಸ್ಟ್ರೀಯಲ್ ಪ್ರದೇಶದಲ್ಲಿರುವ ಅನ್ನಪೂರ್ಣ ಗ್ರಾನೈಟ್ ಶೆಡ್ ಹಾಗೂ ಖಾಲಿ ಜಾಗ (L-19, R-15 ) ಎರಡು ಸೈಟುಗಳ ಒಟ್ಟು ವಿಸ್ತೀರ್ಣ 10,300 ಚ.ಅಡಿ ಇದ್ದು, ಮಾರಾಟಕ್ಕಿರುತ್ತದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ

98441 25317
99861 33299


# ಊರಮ್ಮ ದೇವಿ ಜಾತ್ರೆ

## ಏ.2, 3ರಂದು ಜಾತ್ರಾ ಮಹೋತ್ಸವ | 9 ದಿನ ಧಾರ್ಮಿಕ-ಸಾಂಸ್ಕೃತಿಕ ಕಾರ್ಯಕ್ರಮ



**ಹಂಪಿ ಟೈಮ್ಸ್ ಹೊಸಪೇಟೆ**

ಗ್ರಾಮ ದೇವತೆ ಊರಮ್ಮ ದೇವಿ ಜಾತ್ರಾ ಮಹೋತ್ಸವವನ್ನು ಏ.2 ಮತ್ತು 3 ರಂದು ಅದ್ದೂರಿಯಾಗಿ ಆಚರಿಸಲು ತೀರ್ಮಾನಿಸಲಾಗಿದ್ದು, ಒಂಭತ್ತು ದಿನಗಳ ಕಾಲ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ದೇವಸ್ಥಾನ ಜೀರ್ಣೋದ್ಧಾರ ಅಭಿವೃದ್ಧಿ ಸಮಿತಿ ಅಧ್ಯಕ್ಷ ಬಂಡೆ ಶ್ರೀನಿವಾಸ ತಿಳಿಸಿದರು.

ನಗರದ ಊರಮ್ಮ ದೇವಿ ದೇವಸ್ಥಾನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ 34 ನೇ ವಾರ್ಡಿನ ಶ್ರೀ ಗ್ರಾಮ ದೇವತೆ ಊರಮ್ಮ ದೇವಿ ಜಾತ್ರಾ ಮಹೋತ್ಸವವನ್ನು ಶಾಲಿವಾಹನ ಶಕೆ 1945 ಶೋಭಕೃತ್ ನಾಮ ಸಂವತ್ಸರ ಪಾಲ್ಗುಣ ಮಾಸ ಕೃಷ್ಣ ಪಕ್ಷ ಪಾಡ್ಯದಿಂದ ದಶಮಿಯವರೆಗೆ ಮಾ.26 ರಿಂದ ಏ.3 ರವರೆಗೆ ಆಚರಿಸಲು ಗ್ರಾಮದ ಗುರು-ಹಿರಿಯರು ನಿಶ್ಚಿಯಿಸಿದ್ದಾರೆ.

9 ದಿನಗಳ ಕಾಲ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು. ರಾಜ್ಯದಲ್ಲಿ ಬರಗಾಲ ಛಾಯೆ ಆವರಿಸಿದ್ದು, ಮಳೆ,ಬೆಳೆಯಿಲ್ಲದೇ ರೈತರು, ನಾಡಿನ ಜನರು ಸಂಕಷ್ಟ ಎದುರಿಸುವಂತಾಗಿದೆ. ಈ ಹಿನ್ನೆಲೆಯಲ್ಲಿ ಸಮೃದ್ಧ ಮಳೆ,ಬೆಳೆ ಹಾಗೂ ಗ್ರಾಮದ ಸುಭೀಕ್ಷೆಗಾಗಿ ಏ.3 ರಂದು ಊರಮ್ಮ ದೇವಿಗೆ ವಿಶೇಷ ಪೂಜೆ ಸಲ್ಲಿಸಲಾಗುವುದು.

ಅಂದು ಭಕ್ತರು ದೇವಿಗೆ ಹೂ, ಹಣ್ಣು, ಕಾಯಿ, ಕಾಣಿಕೆ ಅರ್ಪಿಸಿ, ಪೂಜೆ ಸಲ್ಲಿಸಬಹುದಾಗಿದೆ. ಸಂಜೆ ಸಾಂಸ್ಕೃತಿಕ ಕಾಯಕ್ರಮಗಳು ನಡೆಯಲಿದ್ದು, ಗಿಚ್ಚಿಗಿಲಿಗಿಲಿ ಖ್ಯಾತಿಯ ಹಾಸ್ಯ ಕಲಾವಿದರು ಭಾಗವಹಿಸಲಿದ್ದಾರೆ. ಸ್ಥಳೀಯ ಕಲಾವಿದರಿಂದ ಭರತನಾಟ್ಯ, ಸಂಗೀತ ಕಾರ್ಯಕ್ರಮಗಳು ನಡೆಯಲಿವೆ ಎಂದರು. ಏ.2 ರಂದು ನಗರದಲ್ಲಿ ಭವ್ಯ ಶೋಭಾಯಾತ್ರೆ ನಡೆಯಲಿದ್ದು, 30 ಕಲಾ >> 2

# ಹೋಳಿ ಹಬ್ಬ ಜಿಲ್ಲಾದ್ಯಾಂತ ಮದ್ಯ ಮಾರಾಟ ನಿಷೇಧ

**ಹಂಪಿ ಟೈಮ್ಸ್ ಹೊಸಪೇಟೆ**



2024ನೇ ಸಾಲಿನ ಹೋಳಿಹಬ್ಬದ ಆಚರಣೆಯ ಪ್ರಯುಕ್ತ ಜಿಲ್ಲೆಯಲ್ಲಿ ಯಾವುದೇ ರೀತಿಯ ಅಹಿತಕರ ಘಟನೆಗಳು ಜರುಗದಂತೆ ಕಾನೂನು ಸುವ್ಯವಸ್ಥೆ ಹಾಗೂ ಶಾಂತಿ ಪಾಲನೆಗಾಗಿ ಮತ್ತು ಸಾರ್ವಜನಿಕರ ಹಿತಾಸಕ್ತಿ ಕಾಪಾಡುವ ಹಿತದೃಷ್ಟಿಯಿಂದ ವಿವಿಧ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಬರುವ ಮದ್ಯದಂಗಡಿಗಳನ್ನು ತಾತ್ಕಾಲಿಕವಾಗಿ ಮುಚ್ಚುವಂತೆ ಹಾಗೂ ಮದ್ಯಮಾರಾಟ ಮಾಡದಂತೆ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾ ದಂಡಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ಎಂ.ಎಸ್.ದಿವಾಕರ ಅವರು ಆದೇಶ ಹೊರಡಿಸಿದ್ದಾರೆ.

**ಹೊಸಪೇಟೆ ಉಪ ವಿಭಾಗದಲ್ಲಿ:** ಮಾರ್ಚ 24ರ ಸಂಜೆ 06 ಗಂಟೆಯಿಂದ ಮಾರ್ಚ 25ರ ಸಂಜೆ 06 ಗಂಟೆಯವರೆಗೆ ಹಂಪಿ ಕಮಲಾಪುರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಮಾರ್ಚ 25ರ ಸಂಜೆ 06 ಗಂಟೆಯಿಂದ ಮಾ.26ರ ಸಂಜೆ 06 ಗಂಟೆಯವರೆಗೆ ಮದ್ಯದಂಗಡಿಗಳನ್ನು ತಾತ್ಕಾಲಿಕವಾಗಿ ಮುಚ್ಚುವಂತೆ ಹಾಗೂ ಮದ್ಯಮಾರಾಟ ಮಾಡದಂತೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

**ಕೂಡ್ಲಿಗಿ ಉಪವಿಭಾಗದಲ್ಲಿ:** ಕೂಡ್ಲಿಗಿ, ಗುಡೆಕೋಟೆ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಮಾರ್ಚ 24ರ ಸಂಜೆ 06 ಗಂಟೆಯಿಂದ ಮಾ.26ರ ಸಂಜೆ 06 ಗಂಟೆಯವರೆಗೆ, ಕೊಟ್ಟೂರು, ಹೊಸಳ್ಳಿ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಮಾ.25ರ ಸಂಜೆ 06 ಗಂಟೆಯಿಂದ ಮಾ.26ರ ರಾತ್ರಿ 10 ಗಂಟೆಯವರೆಗೆ, ಎಂ.ಎಂ.ಹಳ್ಳಿ, ಹೆಚ್.ಬಿ.ಹಳ್ಳಿ, ತಂಬ್ರಹಳ್ಳಿ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಮಾರ್ಚ 24ರ ಸಂಜೆ 06 ಗಂಟೆಯಿಂದ ಮಾ.25ರ ಸಂಜೆ 06 ಗಂಟೆಯವರೆಗೆ ಮದ್ಯದಂಗಡಿಗಳನ್ನು ತಾತ್ಕಾಲಿಕವಾಗಿ ಮುಚ್ಚುವಂತೆ ಹಾಗೂ ಮದ್ಯಮಾರಾಟ ಮಾಡದಂತೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

**ಹರಪನಹಳ್ಳಿ ಉಪವಿಭಾಗದಲ್ಲಿ:** ಹಡಗಲಿ, ಹಿರೇಹಡಗಲಿ, ಇಟ್ಟಿಗಿ, ಹರಪನಹಳ್ಳಿ, ಹಲವಾಗಲು, ಚಿಗಟೇರಿ, ಅರಸೀಕೇರೆ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಮಾ.25ರ ಬೆಳಿಗ್ಗೆ 06 ಗಂಟೆಯಿಂದ ಮಾ.26ರ ರಾತ್ರಿ 08 ಗಂಟೆಯವರೆಗೆ ಮದ್ಯದಂಗಡಿಗಳನ್ನು ತಾತ್ಕಾಲಿಕವಾಗಿ ಮುಚ್ಚುವಂತೆ ಹಾಗೂ ಮದ್ಯಮಾರಾಟ ಮಾಡದಂತೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

# ಶ್ರೀ ರೇಣುಕಾಚಾರ್ಯ ಜಯಂತಿ ಸರಳ ಆಚರಣೆ



**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಶ್ರೀ ರೇಣುಕಾಚಾರ್ಯ ಜಯಂತಿಯನ್ನು ಶನಿವಾರ ಜಿಲ್ಲಾಧಿಕಾರಿ ಕಾರ್ಯಾಲಯದ ಸಭಾಂಗಣದಲ್ಲಿ ಸರಳವಾಗಿ ಆಚರಿಸಲಾಯಿತು.

ಲೋಕಸಭೆ ಸಾರ್ವತ್ರಿಕ ಚುನಾವಣೆ-2024ರ ಅಂಗವಾಗಿ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಶ್ರೀ ರೇಣುಕಾಚಾರ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಸರಳ ಹಾಗೂ ಸಾಂಕೇತಿಕವಾಗಿ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ವೀರಶೈವ ಲಿಂಗಾಯತ ಸಮಾಜದ ಮುಖಂಡರಾದ ಸಾಲಿಸಿದ್ದಯ್ಯಸ್ವಾಮಿ, ಗೊಗ್ಗ ಚನ್ನಬಸವರಾಜ, ಎಚ್.ವಿ.ಶರಣಸ್ವಾಮಿ, ತಿಪ್ಪೇಸ್ವಾಮಿ, ಬಿ.ಹಾಲನಗೌಡ ಸೇರಿದಂತೆ ಅನೇಕರು ಇದ್ದರು.



**ಕಂಪ್ಲಿ ತಹಶೀಲ್ದಾರ ಕಚೇರಿಯಲ್ಲಿ ಜಗದ್ಗುರು ಶ್ರೀ ರೇಣುಕಾಚಾರ್ಯರ ಜಯಂತಿ ಆಚರಿಸಲಾಯಿತು. ತಹಸಿಲ್ದಾರ ಶಿವರಾಜ್, ಗ್ರೇಡ್ 2 ತಹಸಿಲ್ದಾರರಾದ ಷಣ್ಮಕ್ಕಯ್ಯ. ವೀರಶೈವ ಲಿಂಗಾಯತ ಸಮಾಜದ ಹೆಮಯ್ಯ ಸ್ವಾಮಿ. ಮೂಕಯ್ಯ ಸ್ವಾಮಿ. ಪತ್ರಾಯ ಸ್ವಾಮಿ. ಟಿಹೆಚ್ಎಂ ರಾಜಕುಮಾರ ಜಡಯ್ಯ ಸ್ವಾಮಿ, ಕಾಶಿನಾಥ ವೀರೇಶ ವಾಗೀಶ ಮೃತ್ಯುಂಜಯ ಸಚಿನ್ ಘನ ಮಠದ ಶಾಸ್ತ್ರಿ. ಇತರರಿದ್ದರು.**

# ಸ್ವಾತಂತ್ರ್ಯದ ಹಿಂದಿದೆ ತ್ಯಾಗ

**ಹಂಪಿ ಟೈಮ್ಸ್ ಹೊಸಪೇಟೆ**

ರಾಷ್ಟ್ರದ ವಿಷಯ ನಮಗೇಕೇ ಬೇಕು ಎಂದು ಸುಮ್ಮನಿರದೇ, ವಿಚಾರಗಳು ಸರಿ ಇದ್ದಾಗ ಧ್ವನಿಗೂಡಿಸಬೇಕು, ಧಕ್ಕೆಯಾಗುವಂತಿದ್ದರೆ ಪ್ರಶ್ನಿಸುವ, ನ್ಯಾಯಕ್ಕಾಗಿ ಹೋರಾಡುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಯುವ ಬ್ರಿಗೇಡ್‌ನ ಪಾಂಡುರಂಗ ಹೇಳಿದರು.

ನಗರದ ಶ್ರೀರಾಮುಲು ಪಾರ್ಕ್ ನಲ್ಲಿ ಪತಂಜಲಿ ಯೋಗ ಸಮಿತಿ ಶ್ರೀರಾಮುಲು ಪಾರ್ಕ್ ಯೋಗ ಕೇಂದ್ರ ಸಹಯೋಗದಲ್ಲಿ ಹಮ್ಮಿಕೊಂಡ ಸ್ವತಂತ್ರ್ಯ ಹೋರಾಟಗಾರರಾದ ರಾಜಗುರು, ಭಗತ್ ಸಿಂಗ್, ಸುಖದೇವ ಬಲಿದಾನದ ನೆನಪಿಗಾಗಿ ಹಮ್ಮಿಕೊಂಡ ಬಲಿದಾನ ದೀವಸ್ ಕಾರ್ಯಕ್ರಮದಲ್ಲಿ ಮಾತನಾಡಿದರು. ದೇಶದಲ್ಲಿ ಶಾಂತಿ ಹಾಗೂ ಕಾಂತ್ರಿಯ ಹೋರಾಟದಿಂದ ಸ್ವಾತಂತ್ರ್ಯ ತಂದುಕೊಟ್ಟದ್ದರಿಂದ ಅನೇಕರು ಇಂದಿಗೂ ಅವರನ್ನು ಸ್ಮರಣೆ ಮಾಡಲಾಗುತ್ತಿದೆ.





ಸ್ವಾತಂತ್ರ್ಯ ನಂತರವೂ ನಾವು ಇಂದು ಅನ್ಯಾಯವನ್ನು ವಿರೋಧಿಸುವ ನ್ಯಾಯಕ್ಕಾಗಿ ಧ್ವನಿಗೂಡಿಸುವ ಮೂಲಕವೂ ದೇಶದ ಪ್ರಗತಿಗೆ ಅಣಿಯಾಗಬೇಕಿದೆ. ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವವನ್ನೆ ತ್ಯಾಗ ಮಾಡಿದವರನ್ನು ಗೌರವಿಸುವುದು ನಮ್ಮ ಸಂಸ್ಕೃತಿಯಾಗಿದೆ ಎಂದರು. ರಾಜ್ಯ ಸಮಿತಿಯ ಬಾಲಚಂದ್ರ ಶರ್ಮಾ, ಡಾ.ಪಿ.ಡಿ.ವಿನಾಯಕ ಅಧ್ಯಕ್ಷತೆವಹಿ ಸಿದ್ದರು. ರಾಘವೇಂದ್ರ ಪರಗಿ ಪ್ರಾಸ್ತಾವಿಕ ವಾಗಿ ಮಾತನಾಡಿದರು. ಅಮೃತ ಪೈ ದೇಶ ಭಕ್ತಿಗೀತೆ ಹಾಡಿದರು, ಕಿರಣಕುಮಾರ, ರಾಜೇಶ ಕರ್ವಾ, ಭೂಪಾಳ ರಾಘವೇಂದ್ರ ಶೆಟ್ಟಿ, ಮಂಗಳ, ಅನಂತ ಜೋಶಿ, ಡಾ.ರಾಜಶೇಖರ, ಡಾ.ಸುಮಂಗಳಮ್ಮ, ಕಟ್ಟಾ ನಂಜಪ್ಪ, ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು. ಹೊಸಪೇಟೆಯ ವಿವಿಧ ಯೋಗ ಕೇಂದ್ರದ ಸಂಚಾಲಕರು, ಯೋಗಸಾದಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಂಜೆ ವಿವಿಧ ಸಂಘಟನೆಗಳಿಂದ ಪಂಜಿನ ಮೆರವಣಿಗೆಯಲ್ಲಿ ಘೋಷಣೆಗಳನ್ನು ಕೂಗಿ ಸ್ಮರಿಸಿ ಗೌರವಿಸಿದರು.




## ವಚನ ಅರಿವು

### ಮರುಳನ ಹರ್ಷದಂತೆ

**ಬಾಲಕ ಹಾಲ ಸವಿದಂತೆ,**
**ಮರುಳಿನ ಮನದ ಹರ್ಷದಂತೆ,**
**ಮೂಗರು ಕಂಡ ಕನಸಿನಂತೆ**
**ಬಂಜೆಯ ಮನದ ನೇಹದಂತೆ,**
**ನೆಯಿ ಆರಿದ ನೆಳಲಂತೆ,**
**ಮಹಾಲಿಂಗ ಗಜೇಶ್ವರನೊಲವು ನೋಡವ್ವಾ.**
**– ಗಜೇಶ ಮಸಣಯ್ಯ**

ಭಕ್ತನು ಸದಾಶಿವನ ಒಲುಮೆಯನ್ನು ಅನುಭವಿಸಿಯೇ ಆನಂದ ಪಡೆಯುತ್ತಾನೆ. ಆ ಅನುಭವ ಪರಮಾನಂದ ಸುಖ ಸಾಗರವಾಗಿರುತ್ತದೆ. ಚಿಕ್ಕ ಮಗು ಹಾಲನ್ನು ಕುಡಿದು ಹೇಗೆ ತೃಪ್ತಿಯಿಂದ ಆಡುತ್ತದೆಯೋ ಹಾಗೆ ಇರುತ್ತದೆ ದೈವದ ಒಲುಮೆ. ಜೀವನದ ಆಗು ಹೋಗುಗಳೆಲ್ಲವನ್ನು ಮರೆತು ಮತಿಭ್ರಮಣೆಯಾಗಿ ಹುಚ್ಚನಾದವನ ಮನವು ಸಂತೋಷದಲ್ಲಿರುವಂತೆ ಇರುತ್ತದೆ. ಏನನ್ನು ಹೇಳಲು ಸಾಧ್ಯವಾಗದ ಮೂಕರು ಕನಸು ಕಂಡದ್ದನ್ನು ಹೇಳಲು ಸಾಧ್ಯವಾಗುವುದಿಲ್ಲ. ಒಳಗೆ ಕಂಡ ದರ್ಶನ ಆನಂದದ ಸ್ಥಿತಿ ಇರುತ್ತದೆ. ಮಕ್ಕಳಾಗದವಳು ಮಗುವಿನ ಹಂಬಲದಲ್ಲಿ ಸದಾ ಸ್ನೇಹವನ್ನು ಆಶಿಸುತ್ತಿರುವ ರೀತಿಯಾಗಿರುತ್ತದೆ. ಜಿಡ್ಡು ಆರಿದ ಮೇಲೆ ಉಳಿವ ನೆರಳಿನಂತೆ ಚೈತನ್ಯ ಅವ್ಯಕ್ತವಾಗಿ ಹಬ್ಬಿದ ಆನಂದ ಒಳಗೆ ತುಂಬಿರುತ್ತದೆ. ಇದು ಭಕ್ತಿಗೆ ದೊರೆತ ಆನುಭಾವದ ಒಲುಮೆಯಾಗಿರುತ್ತದೆ ಎನ್ನುತ್ತಾನೆ ಶರಣ ಗಜೇಶ ಮಸಣಯ್ಯ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

## ಬೆಳಕಿನ ಹಾದಿ

### ಸಾತ್ವಿಕ ಆಹಾರ



■ **ಚೇತನ್ ಭಾರ್ಗವ**

ಆಹಾರ ಶುದ್ಧ ಸತ್ವ ಶುದ್ಧಿಃ

ಶುದ್ಧ ಮನಸ್ಸಿನ ಜನರು ಶುದ್ಧವಾದ ಸಾತ್ವಿಕ ಆಹಾರವನ್ನು ಸೇವಿಸುತ್ತಾರೆ. ಮನುಷ್ಯನ ವ್ಯಕ್ತಿತ್ವವನ್ನು ಅವನ ಗುಣದಿಂದಾಗಿ ತಿಳಿದುಕೊಳ್ಳಬಹುದು. ಸಾಮಾನ್ಯವಾಗಿ ಮೂರು ವಿಧದ ಗುಣವನ್ನು ಹೊಂದಿದ ಜನರನ್ನು ಭೂಮಿಯ ಮೇಲೆ ನೋಡಬಹುದು ಮೊದಲನೆಯದಾಗಿ ಸತ್ವ ಅಥವಾ ಸಾತ್ವಿಕ ಗುಣವನ್ನು ಹೊಂದಿದ ಜನರು. ಇವರು ಶಾಂತತೆ ಸಾಮರಸ್ಯ ಸಮಚಿತ್ತತೆ ಗುಣಗಳನ್ನು ಹೊಂದಿರುತ್ತಾರೆ. ಇವರಿಗೆ ಆಧ್ಯಾತ್ಮದ ಕಡೆ ಒಲವು ಹೆಚ್ಚಾಗಿರುತ್ತದೆ.

ಎರಡನೆಯದಾಗಿ ರಜೋಗುಣ ,ಇಂತಹ ಗುಣವನ್ನು ಉಳ್ಳವರು ಆಕ್ರಮಣ ಶೀಲ ಸ್ವಭಾವದವರಾಗಿರುತ್ತಾರೆ. ಮೂರನೆಯದಾಗಿ ತಮೋಗುಣ ಇಂತಹ ವ್ಯಕ್ತಿತ್ವವುಳ್ಳವರು ಸೋಮಾರಿಗಳಾಗಿ, ಯಾವುದೇ ಕೆಲಸವನ್ನು ಮಾಡಲು ಆಸಕ್ತಿ ತೋರದೆ ಆಲಸ್ಯದ ಸ್ವಭಾವದವರಾಗಿರುತ್ತಾರೆ.

ಹಾಗೆಯೇ ಆಹಾರದಲ್ಲೂ ಅವುಗಳ ಗುಣದ ಮೇಲೆ ಸಾತ್ವಿಕ ಆಹಾರ ರಾಜಸಿಕ ಆಹಾರ ಮತ್ತು ತಾಮಸಿಕ ಆಹಾರವೆಂದು ಮೂರು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ಪರಿಶುದ್ಧ ಮತ್ತು ತಾಜಾ ರೂಪದಲ್ಲಿರುವ ಆಹಾರವನ್ನು ಸಾತ್ವಿಕ ಆಹಾರವೆಂದು ಎಣ್ಣೆಯುಕ್ತ ಹಾಗೂ ಅತಿಯಾದ ಮಸಾಲೆ ಪದಾರ್ಥಗಳಿಂದ ಕೂಡಿದ ಆಹಾರವನ್ನು ರಾಜಸಿಕ ಆಹಾರವೆಂದು ತಾಜಾ ರೂಪದಲ್ಲಿರದೆ ತಣ್ಣನೆಯ ಶೇಖರಿಸಲ್ಪಟ್ಟ ಆಹಾರವನ್ನು ತಾಮಸಿಕ ಆಹಾರವೆಂದು ಕರೆಯಲಾಗುತ್ತದೆ.

ಮನುಷ್ಯನ ಸ್ವಭಾವ ಗುಣಗಳು ಅವನು ಸೇವಿಸುವ ಆಹಾರ ಪದ್ಧತಿಯ ಮೇಲೆ ಅವಲಂಬಿತವಾಗಿರುತ್ತದೆ. ರಾಜಸಿಕ ಗುಣವನ್ನು ಹೊಂದಿರುವ ಆಹಾರಗಳು ಮನುಷ್ಯನಿಗೆ ಎಂತಹ ಕಷ್ಟಕರ ಕೆಲಸವನ್ನು ಮಾಡಲು ಪ್ರೇರೇಪಿಸುತ್ತದೆ. ತಾಮಸಿಕ ಗುಣವನ್ನು ಹೊಂದಿರುವ ಆಹಾರಗಳು ಮನುಷ್ಯನ ಆಲಸ್ಯ, ಸೋಮಾರಿತನವನ್ನು ಹೆಚ್ಚು ಮಾಡುತ್ತದೆ. ಸಾತ್ವಿಕ ಗುಣಗಳನ್ನು ಹೊಂದಿರುವ ಆಹಾರಗಳು ಪೌಷ್ಟಿಕ ಯುಕ್ತವಾದ ಆಹಾರವಾಗಿದ್ದು ಆರೋಗ್ಯಕರ ಜೀವನವನ್ನು ನಡೆಸಲು ಸಹಾಯ ಮಾಡುತ್ತದೆ. ಸಾತ್ವಿಕ ಆಹಾರವನ್ನು ಸೇವಿಸುವುದರಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯದ ಬಲವೃದ್ಧಿಯಾಗುತ್ತದೆ. ಆದ್ದರಿಂದ ಸಾತ್ವಿಕ ಗುಣ ಹೊಂದಿರುವ ಆಹಾರವನ್ನು ಸೇವಿಸುವುದು ಒಳಿತು.

ಸಾತ್ವಿಕ ಆಹಾರವು ಆಯುರ್ವೇದದ ಅಂಶವುಳ್ಳ ಪರಿಶುದ್ಧ ಸಸ್ಯ ಆಹಾರ. ಹಸಿರು ತರಕಾರಿಗಳು, ತಾಜಾ ಹಣ್ಣು ,ಶುದ್ಧ ಹಣ್ಣಿನ ರಸಗಳು, ಮೊಳಕೆಯೊಡೆದ ಧಾನ್ಯಗಳು, ಹಾಲು, ಗಿಡಮೂಲಿಕೆಗಳು ಮುಂತಾದ ಆಹಾರಗಳು ಸಾತ್ವಿಕ ಆಹಾರವಾಗಿದೆ.ಸಾತ್ವಿಕ ಆಹಾರವನ್ನು ಲಘುವಾಗಿ ಅಥವಾ ಹಬೆಯಲ್ಲಿ ಬೇಯಿಸಲಾಗುತ್ತದೆ. ಇದರಲ್ಲಿ ದೇಹಕ್ಕೆ ಅವಶ್ಯಕವಾಗಿರುವ ಪೋಷಕಾಂಶಗಳು, ಜೀವಸತ್ವಗಳು,ಆರೋಗ್ಯಕರ ಕೊಬ್ಬು, ಪ್ರೋಟೀನ್ ಅಂಶಗಳು ವಿಟಮಿನ್ ಸಿ ಈ ಮತ್ತು ಕೆ ಹಾಗೂ ಬೀಟಾ ಕ್ಯಾರೋಟಿನ್ ಗಳು ಇರುತ್ತದೆ. ಇವುಗಳನ್ನು ಸೇವಿಸುವುದರಿಂದ ನಮಗೆ ಉತ್ತಮವಾದ ಆರೋಗ್ಯವು ಲಭಿಸುತ್ತದೆ.

ಸಾತ್ವಿಕ ಆಹಾರದಲ್ಲಿ ಹೆಚ್ಚಿನ ಪೌಷ್ಟಿಕಾಂಶ ಖನಿಜಾಂಶ ಪ್ರೋಟೀನ್ ಆಂಟಿ ಆಕ್ಸಿಡೆಂಟ್ ಅಂಶಗಳು ಇರುವುದರಿಂದ ಇದು ನಮ್ಮ ದೇಹದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಸಾತ್ವಿಕ ಆಹಾರದಲ್ಲಿ ನಾರಿನ ಅಂಶವುಳ್ಳ ಸಸ್ಯ ಸಂಬಂಧಿತ ಆಹಾರ ಹೆಚ್ಚಾಗಿರುವುದರಿಂದ ಮನುಷ್ಯನ ಅಧಿಕ ತೂಕವನ್ನು ನಿಯಂತ್ರಿಸಲು ಹಾಗೂ ಜೀರ್ಣಕ್ರಿಯೆಯನ್ನು ಉತ್ತಮಗೊಳಿಸಲು ಸಹಾಯವಾಗುತ್ತದೆ.

ಸಾತ್ವಿಕ ಆಹಾರದಲ್ಲಿ ಔಷಧೀಯ ಗುಣವಿರುತ್ತದೆ ಹಾಗೂ ಇದು ಚರ್ಮದ ಕಾಂತಿಯನ್ನು ಹೆಚ್ಚಿಸುತ್ತದೆ. ಆಯುರ್ವೇದ ಪದ್ಧತಿಯ ಪ್ರಕಾರ ನಾವು ಸೇವಿಸುವ ಆಹಾರವು ದೈಹಿಕ ಶಕ್ತಿಯನ್ನು ಒದಗಿಸುವುದರ ಜೊತೆಗೆ ಬೌದ್ಧಿಕ ಶಕ್ತಿಯನ್ನು ಮತ್ತು ನಮ್ಮ ವ್ಯಕ್ತಿತ್ವವನ್ನು ರೂಪಿಸಲು ಸಹಕಾರಿಯಾಗುತ್ತದೆ. ನಮ್ಮ ಹಿಂದಿನ ಪೀಳಿಗೆಯವರು ಸಾತ್ವಿಕ ಆಹಾರ ಪದ್ಧತಿಯನ್ನು ಅಳವಡಿಸಿಕೊಂಡು ಸರಳವಾದ ಹಾಗೂ ಆರೋಗ್ಯಕರ ಜೀವನವನ್ನು ನಡೆಸುತ್ತಿದ್ದರು.

ಸಾತ್ವಿಕ ಆಹಾರ ಸೇವಿಸುವವರು ಶಾಂತ ಸ್ವಭಾವದವರಾಗಿರುತ್ತಾರೆ. ಅರಿಷಡ್ವರ್ಗಗಳನ್ನು ಜಯಿಸುವ ಶಕ್ತಿ ಅವರಿಗಿರುತ್ತದೆ. ಅವರ ಮನಸ್ಸು ಯಾವುದೇ ಒತ್ತಡಕ್ಕೆ ಸಿಲುಕದೆ ಪ್ರಶಾಂತವಾಗಿರುತ್ತದೆ. ಹಾಗಾಗಿಯೇ ಯೋಗ ಸಾಧಕರು ಸನ್ಯಾಸಿಗಳು ಸಾತ್ವಿಕ ಆಹಾರವನ್ನೇ ಸೇವಿಸುತ್ತಾರೆ. ಸಾತ್ವಿಕ ಆಹಾರವು ನಮ್ಮ ಸಂಪೂರ್ಣ ಆರೋಗ್ಯವನ್ನು ಕಾಪಾಡುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮಾರಣಾಂತಿಕ ರೋಗಗಳ ಸಮಸ್ಯೆಯನ್ನು ನಿವಾರಣೆ ಮಾಡುವಲ್ಲಿ ಸಹಾಯಕವಾಗಿದೆ. ಸ್ವಸ್ಥ ಪೂರ್ಣ ಜೀವನಕ್ಕೆ ಸಾತ್ವಿಕ ನಡತೆ ಹೇಗೆ ಅಗತ್ಯವೋ ಹಾಗೆಯೇ ಒತ್ತಡ ರಹಿತ ಆರೋಗ್ಯಕರ ದೇಹಕ್ಕೆ ಸಾತ್ವಿಕ ಆಹಾರ ಅತ್ಯಗತ್ಯ.


ಆಯುಃ–ಸತ್ವ–ಬಾಲಾರೋಗ್ಯ–ಸುಖ–ಪ್ರೀತಿ–ವಿವರ್ಧನಃ
ರಸ್ಯಃ ಸ್ನಿಗ್ಧಃ ಸ್ಥಿರ ಹೃದಯಾ ಆಹಾರಃ ಸಾತ್ವಿಕ–ಪ್ರಿಯಾಃ

### ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

# ಹಂಪಿಯ ಕಲ್ಲು ಮಠದ ಪ್ರಭುದೇವನ ಲಿಂಗಲೀಲಾವಿಲಾಸ ಚಾರಿತ್ರ

## ಹಂಪಿ ಒಳನೋಟ




ಕರ್ನಾಟಕ ಸಾಮ್ರಾಜ್ಯವೆಂದೆ ಹೆಸರು ಪಡೆದುಕೊಂಡಿರುವ ವಿಜಯನಗರ ಸಾಮ್ರಾಜ್ಯದ ಚರಿತ್ರೆಯು ಹಲವಾರು ಕೌತುಕ ಮತ್ತು ಕುತೂಹಲಗಳಿಗೆ ಸಾಕ್ಷಿಯಾಗಿದೆ. ವಿಜಯನಗರದ ಚರಿತ್ರೆ ಎಂದರೆ ಇದೇ ಅಥವಾ ಇದೇ ಅಂತಿಮ ಚರಿತ್ರೆ ಎಂದು ಹೇಳಲು ಈವರೆಗೂ ಯಾವ ಚರಿತ್ರಾಕಾರರಿಗೂ ಸಾಧ್ಯವಾಗಿಲ್ಲ. ಹಾಗೂ ಅದು ಸಾಧ್ಯವೂ ಆಗಲಾರದು. ವಿಜಯನಗರ ಸಾಮ್ರಾಜ್ಯವನ್ನು ಸುಮಾರು259 ವರ್ಷಗಳ ಕಾಲ ನಾಲ್ಕು ರಾಜವಂಶಗಳಾದ, ಸಂಗಮ ಸಾಳವ ತುಳುವ ಮತ್ತು ಅರವೀಡು ಮನೆತನಗಳು ಆಳ್ವಿಕೆ ನಡೆಸಿವೆ . ಈ ಮನೆತನಗಳಲ್ಲಿ ಸಂಗಮ ವಂಶದ ಪ್ರೌಢದೇವರಾಯ ಸುಮಾರು 22 ವರ್ಷಗಳ ಕಾಲ ಸಮರ್ಥವಾಗಿ ರಾಜ್ಯಭಾರ ಮಾಡಿದ್ದವನು ಪ್ರೌಢದೇವರಾಯ.ಇವರನ್ನು ಎರಡನೇ ದೇವರಾಯ, ಇಮ್ಮಡಿ ದೇವರಾಯ, ಪ್ರೌಢ ಪ್ರತಾಪರಾಯ ಎಂಬ ಹೆಸರಿನಿಂದಲೂ ಕರೆಯಲಾಗಿದೆ. ಸಂಗಮ ವಂಶದ ರಾಜರುಗಳು ಕೇವಲ ರಾಜಕೀಯವಾಗಿ ಆಡಳಿತ ನಡೆಸದೆ ಸಾಮಾಜಿಕವಾಗಿ ಧಾರ್ಮಿಕವಾಗಿ ಸಾಂಸ್ಕೃತಿಕವಾಗಿಯೂ ಸಾಹಿತ್ಯಿಕವಾಗಿಯು ಕಾರ್ಯಗಳನ್ನು ಮಾಡುತ್ತಾ, ಕರ್ನಾಟಕ ಸಾಮ್ರಾಜ್ಯದ ಶ್ರೇಷ್ಠ ರಾಜ ಪ್ರೌಢದೇವರಾಯ ಎಂದು ಚರಿತ್ರೆ ಕಾರರು ಗುರುತಿಸಿದ್ದಾರೆ.

12ನೇ ಶತಮಾನದಲ್ಲಿ ಬಸವಣ್ಣನವರ ನೇತೃತ್ವದ ಶರಣ ಚಳವಳಿ ಹಾಗೂ ವಚನ ಸಾಹಿತ್ಯ ಅತ್ಯಂತ ಮಹತ್ವದ ಧಾರ್ಮಿಕ, ಸಾಹಿತ್ಯಿಕ, ಸಾಮಾಜಿಕ ಚಳುವಳಿಯಾಗಿತ್ತು. ಆದರೆ ಕಲ್ಯಾಣ ಕ್ರಾಂತಿಯ ನಂತರ ಶರಣರು, ಅವರ ವಚನ ಸಾಹಿತ್ಯ ಚದುರಿಹೋಗಿತ್ತು. ಆದರೆ ವಿಜಯನಗರ ಸಾಮ್ರಾಜ್ಯದ ಪ್ರೌಢದೇವರಾಯನ ಕಾಲದಲ್ಲಿ ಧಾರ್ಮಿಕ ,ಸಾಹಿತ್ಯಿಕ ,ಸಾಂಸ್ಕೃತಿಕ ಕಾರ್ಯಗಳಿಗೆ ಮನ್ನಣೆ ಬಂದಿದ್ದರಿಂದ ನಾಡಿನ ವಿವಿಧ ಪ್ರದೇಶಗಳಲ್ಲಿ ಇದ್ದ ಶರಣರು ಹಂಪಿಯ ಕಡೆಗೆ ಮುಖ ಮಾಡಿದರು. ಹೀಗೆ ಬಂದ ಶರಣರು ಪಂಡಿತರು, ಅದರಲ್ಲಿಯೂ ನೂರೊಂದು ಶರಣರು ಹಂಪಿಯಲ್ಲಿ ನೆಲೆ ನಿಂತು ವಚನ ಸಾಹಿತ್ಯದ ಸಂಗ್ರಹ ಮರುಜೊಡಣೆ, ಟೀಕು ಮೊದಲಾದ ಕಾರ್ಯಗಳನ್ನು ಮಾಡಿದ್ದವರು. ಇವರೆಲ್ಲರಿಗೂ ಪ್ರೌಢದೇವರಾಯನ ನೆರವು ಪ್ರೋತ್ಸಾಹ ಆಶ್ರಯ ರಾಜಾಶ್ರಯದಿಂದ

ಇವರು ಅತ್ಯಂತ ಶ್ರೇಷ್ಠವಾದ ವಚನ ಸಾಹಿತ್ಯವನ್ನು ಮರು ಜೋಡಿಸಿ, ಧಾರ್ಮಿಕ ಸಾಹಿತ್ಯವನ್ನು ರಚಿಸಿ ಹಂಪಿಯನ್ನು ಧಾರ್ಮಿಕ ಸಾಹಿತ್ಯ ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾಡಿದರು ಈ ಶರಣರು. ನೂರೊಂದು ವಿರಕ್ತರು,ಧಾರ್ಮಿಕವಾದ ವಿಶಿಷ್ಟ ಸಾಹಿತ್ಯ ಸೃಷ್ಟಿಯಿಂದ ಹಂಪಿ 15ನೇ ಶತಮಾನದ ಅತ್ಯಂತ ಪ್ರಮುಖವಾದ ಮಹತ್ವವನ್ನು ಪಡೆಯುತ್ತದೆ. 12ನೇ ಶತಮಾನದಲ್ಲಿ ಶರಣರು ಪ್ರಭುತ್ವವನ್ನು ಧಿಕ್ಕರಿಸಿ ಸಾಹಿತ್ಯ ರಚನೆ ಮಾಡಿದರೆ .15ನೇ ಶತಮಾನದಲ್ಲಿ ಶರಣರು ರಾಜಾಶ್ರಯದಲ್ಲಿ ಸಾಹಿತ್ಯವನ್ನು ಸೃಷ್ಟಿಸಿ ರಾಜಪ್ರಭುತ್ವವನ್ನೇ ವೀರಶೈವವನ್ನಾಗಿಸಿದ್ದರು. ಹೀಗಾಗಿ ಪ್ರೌಢದೇವರಾಯನ ಕಾಲವನ್ನು ವೀರಶೈವ ಸಮುದ್ಧರಣ ಯುಗವೆಂದು ಕರೆಯಲಾಗಿದೆ. ಹೋದ ವಾರ ವೀರಣ್ಣೊಡೆಯನ ಶಿವ ತತ್ವ ಚಿಂತಾಮಣಿ ಬಗ್ಗೆ ಬರೆಯಲಾಗಿತ್ತು ಈ ಬಾರಿ ಅತ್ಯಂತ ಮಹತ್ವದ ಮತ್ತೊಬ್ಬ ಹಂಪಿಯ ಕವಿ ಕಲ್ಲುಮಠದ ಪ್ರಭುದೇವನ ಲಿಂಗಲೀಲಾವಿಲಾಸ ಚರಿತ್ರೆಯ ಕುರಿತು ಒಂದಷ್ಟು ಮಾಹಿತಿ.

ಪ್ರೌಢದೇವರಾಯನ ಕಾಲದಲ್ಲಿ ವಿದ್ಯಾನಗರ ಅಥವಾ ಹಂಪಿಯಲ್ಲಿನೂರಾರು ವಿರಕ್ತರು ಶರಣರು ಕವಿಗಳುಇದ್ದರು. ಇವರುಗಳಲ್ಲಿ ಕರಸ್ಥಳದ ವೀರಣ್ಣೊನೊಡೆಯ, ಚಾಮರಸ ,ಲಕ್ಕಣ್ಣ ದಂಡೀಶ, ಮಹಾಲಿಂಗ ದೇವ, ಕಲ್ಲುಮಠದ ಪ್ರಭುದೇವ ಮೊದಲಾದ ಪ್ರಮುಖರು ವಚನಗಳ ಸಂಕಲನ ವ್ಯಾಖ್ಯಾನ ಈ ಕಾರ್ಯದಲ್ಲಿ ತೊಡಗಿಕೊಂಡಿದ್ದವರು. ಇವರುಗಳಲ್ಲಿ ಕಲ್ಲುಮಠದ ಪ್ರಭುದೇವ ಸಹ ಪ್ರಮುಖನಾದವ.ಇವನು ಕ್ರಿ.ಶ.1430ರಲ್ಲಿ ಹಂಪಿಯಲ್ಲಿ ಇದ್ದವ ಎಂದು ಚರಿತ್ರಾ ಕಾರರ ಅಭಿಪ್ರಾಯ. ಈತ ನೂರೊಂದು ವಿರಕ್ತರಲ್ಲಿ ಒಬ್ಬನೊ ಅಥವಾ ಬೇರೆ ಕವಿಯೇ ಎನ್ನುವುದು ಸ್ಪಷ್ಟವಾಗಿಲ್ಲ. ಆದರೆ ಹಂಪಿಯಲ್ಲಿದ್ದವ ಎನ್ನುವುದು ಸ್ಪಷ್ಟ. ಕಲ್ಲುಮಠದ ಪ್ರಭುದೇವ ಹಂಪಿಯಲ್ಲಿ ವಾಸಿಸುತ್ತಿದ್ದ ಸ್ಥಳ, ಮಹಾನವಮಿ ದಿಬ್ಬದ ಪೂರ್ವದಿಕ್ಕಿನ ವಿಶಾಲ ಭೂಪ್ರದೇಶದ ಬಲ ಭಾಗದಲ್ಲಿ ಕಲ್ಲುಮಠ ಸ್ವರೂಪದ ಗುಹಾಂತರ್ದೇವಾಲಯವೆಂದು ಡಾ. ಮೃತ್ಯುಂಜಯ ರುಮಾಲೆಯವರು ಸ್ಥಳವನ್ನು ಗುರುತಿಸಿದ್ದಾರೆ. ಈ ಹಿಂದೆ ಹಂಪಿಯ ಚಾಮರಸನ ಗುಹೆಯನ್ನು ಖ್ಯಾತ ಸಂಶೋಧಕರಾಗಿದ್ದ ಡಾ. ಎಂ ಚಿದಾನಂದ ಮೂರ್ತಿ ಅವರು ,ಕರಸ್ಥಲದ ವೀರಣ್ಣೊಡೆಯನು ವಾಸಿಸುತ್ತಿದ್ದ ಗುಹೆಯನ್ನು ಖ್ಯಾತ ಶಾಸನ ತಜ್ಞರು, ವಿದ್ವಾಂಸರು ಆದ ಡಾ.ಡಿ.ವಿ. ಪರಮ ಶಿವಮೂರ್ತಿಯವರು ಗುರುತಿಸಿರುತ್ತಾರೆ. ಅವರು ಈಗ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳು. ಕಲ್ಲು ಮಠದ ಪ್ರಭುದೇವ ಲಿಂಗಲೀಲಾವಿಲಾಸ ಚಾರಿತ್ರ ಮತ್ತು ಪ್ರಭುದೇವರ ಮಂತ್ರಗೋಪ್ಯ ಟೀಕೆ ಎಂಬ ಮಹತ್ವದ ಗ್ರಂಥಗಳನ್ನು ರಚಿಸಿದ್ದಾನೆ . ಇದರಲ್ಲಿ ಲಿಂಗ ಲೀಲಾ ವಿಲಾಸ ಚಾರಿತ್ರಿಕವಾದ , ಬಸವೋತರ ಕಾಲದ ಪ್ರಮುಖ ಗ್ರಂಥ. ಲಿಂಗ ಲೀಲಾ ವಿಲಾಸ ವೆಂದರೇನು ಎನ್ನುವುದಕ್ಕೆ ಪ್ರಭುದೇವನು ಲಿಂಗ ಲೀಲೆ ಎಂಬುದು ಸಮಷ್ಟಿ ಪದವೇಯಾಗಿದೆ ಲಿಂಗ ಮತ್ತು ಲೀಲೆ ಬೇರೆ ಬೇರೆ ಪದಗಳೇನು ಅಲ್ಲ ಲಿಕಾರವೇ ಶೂನ್ಯ. ಬಿಂದುವೇ ಲೀಲೆ ಎಂಬುದಾಗಿ ಚನ್ನಬಸವಣ್ಣನ ವಚನಕ್ಕೆ ಪ್ರಭುದೇವ ಸುಂದರವಾದ ತಾತ್ಪರ್ಯ ಬರೆದಿದ್ದಾನೆ .ಇಲ್ಲಿ ಚಾರಿತ್ರ ಅಂದರೆ ಯಾವುದು ಎನ್ನುವ ಪ್ರಶ್ನೆಗೂಅವನಲ್ಲಿ ಉತ್ತರವಿದೆ. ಇದು ಲಿಂಗ ಲೀಲಾ ವಿಲಾಸ ಚಾರಿತ್ರವೇ ಶರಣ ಚಾರಿತ್ರವೆಂದು ಪುರಾತನರ ವಚನಗಳಿಂದ ಕಾಣಲಾಯಿತ್ತಾಗಿ ಇದು ಚರಿತ್ರೆ ಶರಣನ ಅಂಗ ಮತ್ತು ಲಿಂಗಗಳ ಸಾಮರಸ್ಯದ ಚರಿತ್ರ. ಇದು ಶರಣನ ಬಾಹ್ಯ ಜೀವನದ ಕಥೆಯಲ್ಲ ಷಡುಸ್ಥಲ ಮಾರ್ಗದಲ್ಲಿ ಭಕ್ತವಿಡಿದಾಚರಿಸುವ ಶರಣನ ಲಿಂಗ ಲೀಲಾ ವಿಲಾಸದ ಕಥೆ.ಲಿಂಗವು ತಾನೇ ಶರಣನೆನಿಸಿ ತನ್ನ ತಾನರ್ಚಿಸಿಕೊಳ್ವ ಸ್ವಲೀಲಾನಂದ ಚರಿತೆ ಈ ಲಿಂಗ ಲೀಲಾ ವಿಲಾಸ ಚರಿತವನು ಶಿವಶರಣರು ತಮ್ಮ ಚಾರಿತ್ರ್ಯವೆಂದು ತಮ್ಮ ನಿಜವೆಂದು ತಮ್ಮ ಮಹತ್ವವೆಂದು ಆನಂದಿಸುವರು ಎಂಬುದಾಗಿ ಪ್ರಭುದೇವನು ಹೇಳಿದ್ದಾನೆ.ಈ ಗ್ರಂಥವು ವಚನ ವ್ಯಾಖ್ಯಾನಕ್ಕೆ ಸಂಬಂಧಿಸಿದೆ. ಇವನು ಸಂಕಲನಕಾರನು ಹೌದು ವ್ಯಾಖ್ಯಾನಕಾರನು ಹೌದು.ಇದರಲ್ಲಿ 12ನೇ ಶತಮಾನದ 36 ವಚನಕಾರರ 770ವಚನಗಳನ್ನು ಸಂಕಲಿಸಿ, ವ್ಯಾಖ್ಯಾನ ಬರೆಯುವಂತ ಕಾರ್ಯವನ್ನು ಮಾಡಿದ್ದಾನೆ. ಬಸವಣ್ಣ ಅಲ್ಲಮ ಪ್ರಭುದೇವ ಚನ್ನಬಸವಣ್ಣ ಅಕ್ಕಮಹಾದೇವಿ ಮೊದಲಾದ ಪುರಾತನರನ್ನು ಅನುಸರಿಸಿ ವೇದ ಆಗಮಗಳಲ್ಲಿ ಷಟ್ ಸ್ಥಲ ಮಾರ್ಗವಿಲ್ಲ ಎಂದು ಹೇಳುತ್ತಾನೆ. ಷಟ್ ಸ್ಥಲ ಮಾರ್ಗವನ್ನು ತಿಳಿದುಕೊಳ್ಳಬೇಕೆಂದರೆ ಗುರುವಚನಗಳನ್ನು ಮಾತ್ರ ಅವಲಂಭಿಸಬೇಕೆಂದು ಹೇಳುತ್ತಾನೆ. ಆ ವಚನಗಳು ಯಾರವು ಎಂದರೆ ಬಸವಣ್ಣ ಅಲ್ಲಮ ಚನ್ನಬಸವಣ್ಣ ಅಕ್ಕಮಹಾದೇವಿ ಮುಂತಾದರ ಪುರಾತನರ ವಚನಗಳು ಎನ್ನುತ್ತಾನೆ.



ಎಂ.ಎಂ.ಶಿವಪ್ರಕಾಶ
ಲೇಖಕರು: ಹೊಸಪೇಟೆ

Scan For Digital Colourful
HAMPI TIMES E-paper

ಶರಣರು ಲಿಂಗಾನುಭವವನ್ನು ಅದರಿಂದ ಉಂಟಾಗುವ ಶಿವ ಸುಖವನ್ನು ಅನುಭವಿಸಿದಾಗ ಉಕ್ಕಿಹರಿದ ಸಂತೋಷವೇ ವಚನಗಳಾದವು ಎನ್ನುತ್ತಾನೆ.ಕಲ್ಲು ಮಠದ ಪ್ರಭುದೇವನ ಪ್ರಕಾರ ಶಿವಾನುಭವ ಮಾತ್ರ ಷಟ್ ಸ್ಥಲಶಾಸ್ತ್ರಕ್ಕೆ ಆಧಾರವೇ ಹೊರತು ವೇದ ಆಗಮಗಳಿಂದ ಪಡದ ಎರವಲು ಜ್ಞಾನವಲ್ಲ ಎನ್ನುತ್ತಾನೆ. ವಚನಾಗಮವು ಷಟ್ ಸ್ಥಲ ಸಿದ್ಧಾಂತ ಲಿಂಗ ಕೇಂದ್ರಿತವಾದದ್ದು ಎಂದು ಕಲ್ಲು ಮಠ ಪ್ರಭುದೇವ ಪ್ರತಿಪಾದಿಸುತ್ತಾನೆ.ಭಕ್ತಿ ಕಾಂಡವೆ ಷಟ್ ಸ್ಥಲಮಾರ್ಗ,ಆ ಷಟ್ ಸ್ಥಲಮಾರ್ಗವೇ ಲಿಂಗ ಲೀಲಾ ವಿಲಾಸ ಚಾರಿತ್ರ. ಪುರಾತನರ ವಚನಂಗಳಲ್ಲಿಯೂ ಸಾರವಾದ ವಚನಂಗಳ ತೆಕ್ಕೊಂಡು ಷೋಡಶಸ್ಥಲ ಪರಿಕ್ರಮದಿಂದ ಸೇರಿಸಿ ಅರ್ಥೈಸಿದ ವಚನಾಗಮವಿದು ಇದು ಷಟ್ಸ್ ಸ್ಥಲ ಲಿಂಗಾಂಗ ಸಂಬಂದ ಜ್ಞಾನ ಕ್ರಿಯಾಯುಕ್ತವಾದ ಶರಣ ಮಾರ್ಗ ಈ ಶರಣ ಮಾರ್ಗವೆಂಬುದು ಶಿವರಹಸ್ಯಾನುಭವ ಎನ್ನುತ್ತಾನೆ.

ಕಲ್ಲುಮಠದ ಪ್ರಭುದೇವ ತಾನು ಆಯ್ದುಕೊಂಡ ವಚನಗಳನ್ನು ಗುರುವಚನ,ವಚನಾಗಮ ಎಂದು ಕರೆದಿದ್ದಾನೆ .ಈತನು ಆಯ್ದುಕೊಂಡ ವಚನಕಾರರಲ್ಲಿ ಬಸವಣ್ಣ ಚೆನ್ನಬಸವಣ್ಣ ಅಲ್ಲಮ ಸಿದ್ದರಾಮ ಅಕ್ಕಮಹಾದೇವಿ ಡೋಹರ ಕಕ್ಕಯ್ಯ ಉರಿಲಿಂಗಪೆದ್ದಿ ಉರಿಲಿಂಗ ದೇವ ನುಲಿಯ ಚಂದಯ್ಯ ಅಂಬಿಗರ ಚೌಡಯ್ಯ ಹಡಪದ ಅಪ್ಪಣ್ಣ ಹಾವಿನಾಳ ಕಲ್ಲಯ್ಯ ಬಹುರೂಪಿ ಚೌಡಯ್ಯ ದೇವರ ದಾಸಿಮಯ್ಯ ಅರವಿನ ಮಾರಿತಂದೆ ಹೀಗೆ 38 ವಚನಕಾರರ 770 ವಚನಗಳನ್ನು ಆಯ್ದುಕೊಂಡಿದ್ದಾನೆ .ಇವುಗಳಲ್ಲಿ ಪ್ರಭುದೇವ ನಿಷ್ಕಲ ಲಿಂಗಸ್ಥಳ ಮಹಾಲಿಂಗ ಸ್ಥಳ ಲಿಂಗ ಮೂರ್ತಿ ಸ್ಥಳ ರಂಗಸ್ಥಲ ರಂಗಸ್ಥಲ ಸಂಸಾರ ಸಂಬಂಧ ಸ್ಥಲ ಪಿಂಡ ಸ್ಥಲ ಸಂಸಾರ ಗುರು ಕರುಣ ಸ್ಥಲಮಹೇಶ್ವರ ಸ್ಥಲ ಪ್ರಸಾದಿ ಸ್ಥಲ ಐಕ್ಯ ಸ್ಥಲ ಎಂದು 16 ವಿಭಾಗಗಳನ್ನು ಮಾಡಿದ್ದಾನೆ.

ಲಿಂಗ ಲೀಲಾ ವಿಲಾಸ ಕೃತಿಯು 12ನೇ ಶತಮಾನದ ವಚನಗಳನ್ನು ವಚನಾಗಮವೆಂದು ತನ್ನ ಕಾಲದ ವಿಚಾರ ಪ್ರಣಾಳಿಕೆಗಳಿಗೆ ಸಲ್ಲೋದವುಗಳನ್ನು ಜಡ್ಡು ಗೋಜುಗಳೆಂದು ಶರಣರ ಆಶಯವನ್ನು ಶರಣ ಚಿಂತನೆಗೆ ಸೈದ್ಧಾಂತಿಕ ಸೂತ್ರ ಅನ್ವಯದ ಇಷ್ಟಲಿಂಗ ಕೇಂದ್ರ ವಿನ್ಯಾಸವನ್ನು ಲಿಂಗ ತತ್ವದ ಆಂತ್ಯದಿಕೆ ನೆಲೆಯನ್ನು ಯುಗ ಧರ್ಮದ ಒಂದು ತಾತ್ವಿಕ ಅವಶ್ಯಕತೆಗೆ ಒಂದು ಸೂತ್ರವನ್ನು ಒದಗಿಸಿದ ವಚನಾಧಾರಿತ ಲಿಂಗ ಲೀಲೆಯ ವಿಳಾಸವನ್ನು ಸಾಧ್ಯಂತವಾಗಿ ವಿವೇಚಿಸುವ ಇದು ಒಂದು ಕ್ಲುಪ್ತ ಸಂದರ್ಭದಲ್ಲಿ ಕನ್ನಡ ನಾಡಿನ ಶರಣ ಸಂಸ್ಕೃತಿಯ ಧಾರ್ಮಿಕ ಸಂದರ್ಭದ ಮುಖ್ಯ ಕೃತಿಯಾಗಿರುವುದರ ಜೊತೆಗೆ ಧಾರ್ಮಿಕ ಸ್ಥಿತ್ಯಂತರದ ಪ್ರಾತಿನಿಧಿಕ ಕೃತಿ ಯಾಗಿತ್ತು ಮಹತ್ವ ಪಡೆಯುತ್ತದೆಂದು ಎಂದು ಖ್ಯಾತ ವಿದ್ವಾಂಸರಾದ ಡಾ.ಮೃತ್ಯಂಜಯ ರುಮಾಲೆಯವರು ಅಭಿಪ್ರಾಯಪಡುತ್ತಾರೆ.

ಒಟ್ಟಾರೆಯಾಗಿ ಕಲ್ಲು ಮಠದ ಪ್ರಭುದೇವನ ಲಿಂಗ ಲೀಲಾ ವಿಲಾಸ ಚಾರಿತ್ರವನ್ನು ಗಮನಿಸಿದಾಗ ಶರಣರ ಒಟ್ಟು ಚಳುವಳಿ ಮತ್ತು ಅದರ ಇತಿಹಾಸ ಕಲ್ಲು ಮಠದ ಪ್ರಭುದೇವನಿಗೆ ಲಿಂಗ ಲೀಲೆಯ ವಿಳಾಸದ ಚರಿತ್ರೆ ಎನಿಸಿದೆ ಶರಣರ ತಾತ್ವಿಕ ಚರಿತ್ರೆಯ ಅಧ್ಯಯನವೇ ಶರಣಗಳ ಅಧ್ಯಯನ ವಾಗಿದ್ದು ಪ್ರಭುದೇವ ಅದನ್ನು ಲಿಂಗ ಲೀಲಾ ವಿಳಾಸ ಚಾರಿತ್ರ ಎಂದು ತನ್ನ ಕಾಲದ ಧಾರ್ಮಿಕ ಚಿಂತನೆಗೆ ಸಮೀಕರಿಸಿದ್ದಾನೆ ಅವನ ಪ್ರಕಾರ ವಚನಗಳು ಚಳುವಳಿಯಿಂದ ಸಿಡಿದ ನುಡಿಗಳಾಗಿರಲಿಲ್ಲ ಅವು ಶಿವ ಸುಖ ಉಕ್ಕಿ ಹರಿದ ಫಲಗಳು ಆಗಿವೆ ಎಂದಿದ್ದಾನೆ ಎನ್ನುತ್ತಾರೆ ವಿದ್ವಾಂಸರು. ಇಂಥ ಮಹಾನ್ ಕವಿ ವಿದ್ವಾಂಸ ಪಂಡಿತ ಹಂಪಿಯ ನೆಲದಲ್ಲಿ ಇದ್ದು ತನ್ನ ಮಹತ್ವದ ಎರಡು ಕೃತಿಗಳನ್ನು ಕನ್ನಡ ನಾಡಿಗೆ ನೀಡಿರುವುದು ಚಾರಿತ್ರಿಕವಾಗಿ ಹಾಗೂ ಧಾರ್ಮಿಕವಾಗಿಯು ಅತ್ಯಂತ ಮಹತ್ವದ ಸ್ಥಾನವನ್ನು ಪಡೆದಿದೆ. ಇವನು ಹಂಪಿಯವನಾಗಿದ್ದು ನಮ್ಮವ ಎನ್ನುವುದು ಅತ್ಯಂತ ಹೆಮ್ಮೆಯ ಸಂಗತಿ.

# ಊರಮ್ಮ ದೇವಿ ಜಾತ್ರಾಮಹೋತ್ಸವ

ಮೊದಲ ಪುಟದಿಂದ

ತಂಡಗಳು ಭಾಗವಹಿಸಲಿದ್ದಾರೆ. ದೃಷ್ಟಿಮಾಂದ್ಯ ಮಕ್ಕಳಿಂದ 7 ದಿನಗಳ ಕಾಲ ರಸ ಸಂಜೆ ಕಾರ್ಯಕ್ರಮ ಹಾಗೂ ಪ್ರತಿದಿನ ಸಂಜೆ ಭಜನೆ ನಡೆಯಲಿದೆ ಪ್ರತಿ ಐದು ವರ್ಷಕೊಮ್ಮೆ ನಡೆಸಬೇಕಿದ್ದ ಜಾತ್ರಾ ಮಹೋತ್ಸವ ಕೊರೊನಾ ಹಿನ್ನೆಲೆಯಲ್ಲಿ ಸ್ಥಗಿತವಾಗಿತ್ತು. ಒಂಭತ್ತು ವರ್ಷದ ಬಳಿಕ ಇದೀಗ ಜಾತ್ರಾ ಮಹೋತ್ಸವವನ್ನು ಅದ್ಧೂರಿಯಾಗಿ ಆಚರಿಸಲು ತೀರ್ಮಾನಿಸಲಾಗಿದೆ. ಗ್ರಾಮದ ಸದ್ಭಕ್ತರು, ಪ್ರತಿಯೊಂದು ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಂಭ್ರಮ–ಸಡಗರದಿಂದ ಆಚರಿಸಬೇಕು ಎಂದು ಮನವಿ ಮಾಡಿದರು.

ಊರಮ್ಮ ಜಾತ್ರಾ ಮಹೋತ್ಸವವನ್ನು ಸಂಭ್ರಮದಿಂದ ಆಚರಿಸಲು ಗ್ರಾಮ ದೇವತೆ ಊರಮ್ಮ ದೇವಸ್ಥಾನ ಜೀರ್ಣೋದ್ಧಾರ ಅಭಿವೃದ್ಧಿ ಸಮಿತಿ ಮನವಿ ಮಾಡಿದೆ. ಪ್ರತಿ ಮನೆ ಅಂಗಳದಲ್ಲಿ ರಂಗೋಲಿ, ತಳೀರು ತೋರಣ ಹಾಗೂ ವಿದ್ಯುತ್ ದೀಪಾಲಾಂಕರದಿಂದ ಕಂಗೊಳಿಸುವಂತೆ ಆಚರಿಸುವ ಮೂಲಕ ಭಕ್ತರು ದೇವಿಯ ಕೃಪೆಗೆ ಪಾತ್ರರಾಬೇಕು ಎಂದು ಸಮಿತಿ ಪದಾಧಿಕಾರಿಗಳು ಮನವಿ ಮಾಡಿದ್ದಾರೆ.

ಮುಖಂಡರಾದ ಎಸ್.ಗಾಳೆಪ್ಪ, ಆರ್.ಕೊಟ್ರೇಶ್, ಗೋಸಲ ರ?ಮಪ್ಪ, ಕಿಚಿಡಿ ಶ್ರೀನಿವಾಸ, ಎಚ್.ಎನ್. ಮೊಹ್ಮದ್ ಇಮಾಮ್ ನಿಯಾಜಿ, ಮರಡಿ ರಾಮಣ್ಣ, ಜೆ.ವಸಂತ, ಎಸ್. ಎಸ್,ಚಂದ್ರಶೇಖರ್, ಬಂದಿ ಪಂಪಾಪತಿ, ಕಟಗಿ ವಿಜಯಕುಮಾರ್, ಬಾಣದ ಸುದರ್ಶನ, ತಾರಿಹಳ್ಳಿ ವಾಸಪ್ಪ, ಹೆಚ್. ಹನುಮಂತಪ್ಪ, ಬಂದಿ ಜಂಬಣ್ಣ, ಬಡಗಿ ಮಂಜುನಾಥ, ರಾಘವೇಂದ್ರ ಗೌಡ, ಜಂಬುನಾಥ ಆಚಾರ್ಯ, ಕೆ.ದಿವಾಕರ್, ಗುಂಡಿ ಪ್ರಶಾಂತ್ ಇತರರಿದ್ದರು.

### 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊದ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:** ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ. ಇ–ಮೇಲ್:hampitimes@gmail.com M: 9448633038

ಹಂಪಿ ಟೈಮ್ಸ್
HAMPI TIMES

ಭಾನುವಾರ / Sunday 24.03.2024



# ಕಥೆ ಓದೋಣ ಬನ್ನಿ

## ಕೇದಿಗೆ

ಅಂದು ಊರಿಗೆ ಊರೆ ಗರ ಬಡಿದಾರಂಗ ಸ್ತಬ್ಧ ಆಗಿತ್ತು, ಮನೆಯಾಗಿನ ಹೆಂಗಸರು ತಮ್ಮ ಸೆರಗಿನ ಚುಂಗನ್ನು ಗಟ್ಟಿಯಾಗಿ ಹಿಡುಕೊಂಡು ಮುಚ್ಚಿದ ಬಾಗಿಲ ಸಂದಿಯಿಂದ, ಕಿಟಕಿಯ ಕಿಂಡಿಯಲ್ಲಿ ಉಗುಳು ನುಂಗಲಿಕ್ಕೂ ಹೆದರಿಕೊಂಡು, ಮುಂದೇನು? ಅಂತ ಇಣಿಕೀ ಇಣಿಕಿ ನೋಡುತಿದ್ದರು. ಮಟ ಮಟ ಮದ್ಯಾನ ದಾರಿ ಕಾಣ್ದಾಂಗ ದೂಳೆಬ್ಬುಸುತ ಬಂದ ಜೀಪು, ಸೀದಾ ಜಗ್ಗಿ ಮನೆ ಮುಂದೆ ನಿಂತಿತು. ತಕ್ಷಣ ಕೆಳಗಿಳಿದ ಇಬ್ಬರು ಪೋಲಿಸರು ಮನೆಯೊಳಗ ಹೋದವರೆ ಜಗ್ಗೀನ ಕೈಗೆ ಕೊಳ ತೊಡಿಸಿ ಜೀಪ ಹತ್ತಲೆ ಬೇಕೂಫ ಅಂತ ಕೊಳಪಟ್ಟಿ ಹಿಡಕಂಡು ಹೊರಗ ಬಂದರು!. ಸಾಹೇಬರ ಬುಟ್ಟು ಬಿಡ್ರಿ ನನ್ನ ಮಗನ್ನಾ, ನಿಮ್ಮ ಕಾಲ ಹಿಡಕಂತೀನಿ ಅನ್ನುತ್ತಿದ್ದ ಸೀತಮ್ಮನ ಧ್ವನಿ ಗಂಟಲಿನಲ್ಲೇ ಅಡಗಿ ಹೋಹಿತು, ಎಪ್ಪಾ...ನಮ್ಮಪ್ಪಾ... ಇದೇನು ಸೆದಿ ತಂದಿಯೋ ನಮ್ಮ ತಲೀಗೆ...... ರಾಮಣ್ಣ ಟವಲ್ಲು ಬಾಯಿಗೆ ತುರಿಕಿಕೊಂಡು ಹಣಿ ಹಣಿ ಬಡಿದುಕೊಳ್ಳುತ್ತ ಪೋಲೀಸರ ಕೈಕಾಲಿಗೆ ಬೀಳುತಿದ್ದ. ಜೀಪು ಬುರ್~~ ಅನ್ನುತ್ತ ಬಂದ ದಾರಿಯ ದೂಳಿನಲ್ಲೆ ಕಣ್ಮರೆಯಾಯಿತು.

ಈ ಜಗ್ಗಿ ಇದಾನಲ್ಲ ಜಗದೀಶ, ಶಾಲೆಯ ಹೆಡ್ ಮಾಸ್ಟರ್ ರಿಂದ ಹಿಡುದು ಕಸ ಗುಡಿಸೊ ಬಸಣ್ಣನಿಗೂ ಬೇಕಾಗಿದ್ದವನು. ಶಾಲೆಯಲ್ಲಿ ನೆಡೆಯುತ್ತಿದ್ದ ಎಲ್ಲ ಕರ?ಯಕ್ರಮಗಳ ರುವಾರಿ ಇವನೇ ಆಗಿರುತಿದ್ದ. ಅದಾಗ್ಲೆ ಹತ್ತನೇ ಕ್ಲಾಸು ಮುಗಿಯೋ ಹಂತಕ್ಕ ಬಂದಿತ್ತು, ಪರೀಕ್ಷೆ ಬರೆದಿದ್ದ ಮಕ್ಕಳೆಲ್ಲ ರಿಸೆಲ್ಟಗೆ ಕಾಯಿತಿದ್ದರು, ಶಾಲೆ ನೆಪಕ್ಕ ಮಾತ್ರ ನೆಡೆದಿತ್ತು, ಇನ್ನೇನು ನಾಳೆ ನಾಡಿದ್ದೊ ನಾವೆಲ್ಲ ಬೇರೆ ಬೇರೆ ಊರುಗಳಿಗೆ ಹೋಗಬೇಕಾಗುತ್ತೆ, ನಮ್ಮೂರಲ್ಲೆ ಒಂದು ಕಾಲೇಜು ಇದ್ದಿದ್ದರೆ ಚೊಲೋ ಆಗ್ತಿತ್ತು ಅಂದುಕೊಳ್ಳುತ್ತ ಅವನಿಗೆ, ಆ ಬಿಲ್ವಪತ್ರಿ ಗಿಡದ ಹಿಂದೆ ಪಳಕ್ಕನೆ ಮಿಂಚೊಂದು ಹರಿದಂತಾಯಿತು, ಹಾಗೆ ಕಣ್ಣುಗಳು ಅರಳಿದವು ಕೆನ್ನೆ ಕೆಂಪಾಯಿತು, ತುಟಿಗಳು ಹಿಗ್ಗಿದವು ಎದೆಯ ವಿಸ್ತಾರ ಮತ್ತೊಷ್ಟು ಹಿಗ್ಗಿದಂತಾಯಿತು.

ಅವಳಿರುವುದೇ ಹಾಗೆ ಹಸಿರು ಚೂಡಿದಾರ, ಉದ್ದನೆಯ ಕೇದಿಗೆ ಮಿಶ್ರಿತ ನಾಗರ ಜಡೆಯ, ಉಬ್ಬಿದೆದಯ ಸಣ್ಣ ನಡುವಿನ ಹಾಲು ಬಣ್ಣದ ಮೈಯವಳು, ನಕ್ಕರಂತೂ ಗುಳಿಕೆನ್ನೆಯ ಬೇಲೂರ ಬಾಲಿಕೆ. ನವಿಲಿನ ಕಣ್ಣಿನ ಚಿತ್ತಾರವಿರುವ ವೇಲು ಅವಳ ನೆಡಿಗೆಯ ಲಯಕ್ಕೆ ಹೊಂದಿಕೊಳ್ಳಲಾಗದೆ ಪದೇ ಪದೇ ಜಾರುತಿದ್ದಾಗಲಂತೂ ಸ್ರ?ಗಲೋಕದ ಅಪ್ಸರೆ ಅವಳು, ಬೇಡವೆಂದರೂ ಅವಳ ಎದೆಯಾಳದ ಕೊಳದ ತಳ ಹುಡುಕುವ ನಿಯತ್ತಿನ ನನ್ನ ಕಣ್ಣುಗಳಿಗೆ ಹಬ್ಬದೂಟ ಅವಳು.

ಒಂದು ಕ್ಷಣ ಕಣ್ಣುಮುಚ್ಚಿ ತೆರೆಯುವಷ್ಟರಲ್ಲೇ, ಅವಳೇ! ನನ್ನೆದುರುಗೆ ನಿಂತಿದ್ದಳು ಎದೆಯಲ್ಲಿ ಡವ ಡವ ಕೈ ಕಾಲು ಸೋತಹಾಗೆ ಅನಿಸಿತು. "ಅವನೌನು ಈ ಹುಡಿಗೀರು ದೋರ ಇದ್ದರ ಚಂದ ಅನಿಸಿದ್ದು ಅವತ್ತೇ ನೋಡು" ಅವಳ ಅಗಲವಾದ ತಿಳಿಕೊಳದಂತಿರುವ ಕಣ್ಣುಗಳಲ್ಲಿನ ನನ್ನ ಬಿಂಬವನ್ನು ಬಿಟ್ಟರೆ ಮತ್ತೇನೂ ಕಾಣಲಿಲ್ಲ ನನಗೆ.

ಹೊಯ್ ..... ಬಾಯಿ ಮುಚ್ಚಿಕೊ ನೊಣ ಹೋದಾವು, ನನಗ ಡೈರಿ ಬರೆದು ಕೊಡೋದಿಲ್ಲ ನೀನು? ಹಂಗಾ ಕೈ ಕೊಟ್ಟು ಹೋಗಬೇಕು ಅಂದುಕೊಂಡೀಯ.. ? ಅಂದವಳೆ ಎದೆಗವಚಿಕೊಂಡಿದ್ದ ಡೈರಿಯನ್ನು ನನ್ನ ಕೈಗಿಟ್ಟು ಇನ್ನೊಂದು ಕೈಯನ್ನು ಹಿಡಿದು ತನ್ನ ಎದೆಯ ಮೇಲೆ ಇರಿಸಿಕೊಂಡು, ಸತ್ಯವಾಗಲು ಕಣೊ ನೋಡು ನನ್ನ ಎದೆಯನ್ನು ಹೇಗೆ ಬಡಿದುಕೊಳ್ಳುತಿದೆ, ಇನ್ನು ಮೇಲೆ ನಿನ್ನನ್ನು ನೋಡಲು ಸಾಧ್ಯವಿಲ್ಲ, ನೀನು ಬೇರೆ ಕಡೆಗೆ ಹೋಗುತ್ತೀಯ, ನೀನಿಲ್ಲ ಎನ್ನುವುದನ್ನು ಒಪ್ಪಿಕೊಳ್ಳಲು ಆಗುತ್ತಿಲ್ಲ. ಒಂದು ರೀತಿಯ ಸಂಕಟ,ಎಲ್ಲಾ ಮುಗಿದೇ ಹೋಯಿತು ಎನ್ನುವಂತೆ ಅನಾಥಾ ಪ್ರಜ್ಞೆ ಕಾಡುತ್ತಿದೆ.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

ಅವಳ ಅದುರುತಿದ್ದ ತುಟಿ, ಕಣ್ಣಂಚಿನಲ್ಲಿ ಇಣುಕುತಿದ್ದ ನೀರು, ತಡವರಿಸುತಿದ್ದ ಅವಳ ಮಾತು, ಸೋತ ಮೈ ಮನ ಸ್ಪಷ್ಟವಾಗಿ ಅವಳ ಆತಂಕವನ್ನು ಹರವಿಕೊಳ್ಳುತ್ತಿತ್ತು. ಎಂದೂ ಅಳದ ನಾನು, ಅಂದು ತುಟಿಕಚ್ಚಿ ಕಣ್ಣಾಲೆಗಳು ತುಂಬುತಿರುವುದನ್ನು ಅವಳಿಂದ ಮರೆಮಾಚಲು ಮಾಡಿದ ಪ್ರಯತ್ನ ಅವಳಿಗೆ ತಿಳಿಯದಿರದೆ? ಸರಕ್ಕನೆ ಬಿಗಿದಪ್ಪಿ ಎದೆಗೆ ವರಗಿಕೊಂಡು ಬಿಕ್ಕಳಿಸುತಿದ್ದ ಅವಳ ತಲೆಯನ್ನು ನೇವರಿಸುತ್ತಾ. ಇದೇನು ಆಗಿದೆ ನಿನಗೆ, ಯಾವತ್ತು ಇಲ್ಲದವಳು ಇವತ್ತು ಹಿಂಗ್ಯಾಕ ಮಾಡಕತ್ತೀಯಾ? ನೀ ಯಾವತ್ತಿದ್ದರೂ ನನ್ನ ಗೆಳತೀನೆ, "ಇದ್ದರು ನಿನ್ನ ಜೊತೆನೇ, ಹೋದರೂ ನಿನ್ನ ಕರಕೊಂಡೆ ಹೊಗೋದು" ಗೊತ್ತಾಯ್ತಲ್ಲ, ರಿಸೆಲ್ಟ್ ಬರಲಿ ಆಮೇಲೆ ಮಾತಾಡೊಣ ಅನ್ನುತ್ತಿದ್ದಂತೆ... ನನ್ನ ಕೈಯಲ್ಲಿದ್ದ ನನ್ನ ಡೈರಿಯನ್ನು ಕಿತ್ತುಕೊಂಡು ಬರ ಬರನೆ ಹೊರಟು ಹೋದಳು.



ಮುಂದಿನ ವಾರವೆ ಕಡೆಯ ಶ್ರಾವಣ ಸೋಮವಾರ, ದೇವರ ಪಲ್ಲಕ್ಕಿ ಬಜಾರಕ್ಕೆ ಬರುವುದು ಇದೇ ವಾರ ಕೊನೆ. ಮಾರನೆ ದಿನವೇ ನಮ್ಮೂರ ತೇರು, ಮರೀಬ್ಯಾಡ ತಮ್ಮಾ ನಾಲ್ಕುದಿನ ಮುಂಚೇನೆ ಬಾ ಯಪ್ಪಾ .. ಎನ್ನುತ್ತಾ ನಮ್ಮವ್ವ ಫೋನ್ ಕಟ್ ಮಾಡಿದಳು.

ಹೌದಲ್ಲ ಇರೋ ಬರೋ ಎಲ್ಲಾ ಅಸೈನ್ಮೆಂಟ್ ಗಳನ್ನು ಮುಗಿಸಿ, ಬಟ್ಟೆಬರಿ ಬ್ಯಾಗಿಗೆ ತುಂಬಿಕೊಂಡು ನಾಳೆ ಬೆಳಗ್ಗೆ ಹೊರಡಲಿಕ್ಕೆ ಬೇಕಾದ ಸಿದ್ದತೆ ಮುಗಿಸಿ ಮಲಗುವ ಹೊತ್ತಿಗೆ ರಾತ್ರಿ ಹನ್ನೊಂದು. ಒಂದು ತರಹದ ಸಡಗರ, ಕುತೂಹಲ, ಹೇಗಿರಬಹುದು ಅವಳು, ಅಲ್ಲೇ ಇದ್ದಾಳೊ ಇಲ್ಲವೆ ಬೇರೆ ಎಲ್ಲಿಯಾದರೂ.....? ಒಂದು ವೇಳೆ ಮುಂದೆ ಓದುತ್ತಿರಬಹುದೊ, ಇಲ್ಲವೆ ಮದುವೆ ಗಿದುವೆ ಆಗಿಬಿಟ್ಟಿದ್ದರೆ.....!

ಚೇ..... ಹಾಗೆ ಆಗಲಿಕ್ಕಿಲ್ಲ ಅವರಪ್ಪ .... ಊರ ಗೌಡ, ಮಗಳನ್ನು ದೊಡ್ಡ ಮಟ್ಟಕ್ಕೆ ಓದಿಸುತ್ತಿರಬಹುದು, ಅಂದುಕೊಳ್ಳುತ್ತ ಮಗ್ಗಲು ಬದಲಿಸಿದರೆ, ಆಗಲೆ ಸಮಯ ಬೆಳಗ್ಗೆ ಏಳು! ಪಟಕ್ಕನೆ ಎದ್ದವನೆ ಬರ ಬರ ಹಲ್ಲುಜ್ಜಿ, ದಬ ದಬ ನೀರು ಹೊಯ್ದುಕೊಂಡು, ಹಾಸ್ಟೆಲ್ ನಿಂದ ಕುಮಟ ಬಸ್ಸು ಸ್ಟಾಪ್ ಗೆ ಬಂದರೆ, ಆಗಲೆ ಉಡುಪಿ-ಬಳ್ಳಾರಿ ಬಸ್ಸು ಹೊರಟು ನಿಂತಿತ್ತು! ಡ್ರೈವರ್ ಗೆ ಕೈ ತೋರಿಸುತ್ತಾ, ಸೈಕಲ್ಲನಿಂದ ಇಳಿದವನೆ ಓಡಿಹೋಗಿ, ಬಸ್ಸನ್ನು ಏರಿ ಕುಳಿತುಕೊಂಡೆ.

ಹೆಗಡೆ ಕ್ರಾಸ್ನಲ್ಲಿ ನಿಂತಿದ್ದ ವಿಜಿಗೆ ಕಿಟಿಕಿಯಿಂದಲೆ ಬಾಯ್ ಬಾಯ್ ಮಾಡುತ್ತಾ ನನ್ನ ಸೀಟಿಗೆ ಹಾಗೆ ಒರಗಿಕೊಂಡು, ಹೊರಗಿನ ಸೆರಗಿಗೆ ಕಣ್ಣು ಹಾಯಿಸಿದೆ. ಬಸ್ಸು ಅನಾಯಾಸವಾಗಿ ಅಘನಾಶಿನಿ ಬ್ರಿಡ್ಜ ದಾಟಿ, ದೀವಿಗೆಯ ಬಲ ಬದಿಯ ಏರಿಯನ್ನು ತೇಲುತ್ತಾ-ವಾಲುತ್ತಾ ಹತ್ತ ತೊಡಗಿತು ಸುತ್ತಲೂ ಹಚ್ಚ ಹಸುರಿನ ಬೆಟ್ಟ ಗುಡ್ಡಗಳು, ಅವುಗಳಿಗೆ ಬೆಳ್ಳಿಯ ಹೊದಿಕೆಯಂತೆ ಅಲ್ಲಲ್ಲಿ ಹೊದ್ದ ನಿಂತ ಮೋಡಗಳು, ಕಣ್ಣು ಹಾಯಿಸಿದಷ್ಟೂ ದೂರ ದೂರಕ್ಕೆ ಕಾಣುವ ಕಡಿದಾದ ಇಳಿಜಾರಿನ ಕಣಿವೆಗಳು, ಅಲ್ಲಲ್ಲಿ ಕಾಣುತ್ತಿರುವ ಸಣ್ಣ ಸಣ್ಣ ಗುಡಿಸಲು, ಹಂಚಿನ ಮನೆಗಳು, ಅವುಗಳ ಮೇಲೆ ಜೀವ ನೆಲೆಯ ಕುರುಹುನಂತೆ ಸಣ್ಣದಾದ ಹೊಗೆಯ ಅಲೆಗಳು, ಹಾಲಿನಂತೆ ಧುಮುಕ್ಕುತ್ತಿರುವ ಜಲಪಾತಗಳು ಅಭ್ಭಾ! ಪಶ್ಚಿಮ ಘಟ್ಟದ ಸೊಬಗೇ ಅಂತಹದ್ದು. "ಉತ್ತರ ಕನ್ನಡ" ರ?ನಾಟಕದ ಕಾಶ್ಮೀರವೆ ಸರಿ! ಸಹ್ಯಾದ್ರಿಯ ಮಡಿಲ ಹೊಕ್ಕ ಬಸ್ಸು "ದೇವಿ ಮನೆಯ ಘಾಟ್"ನ ಘೋರ ಕತ್ತಲ್ಲನ್ನು ಸೀಳಿಕೊಂಡು ಬೆಳಕು ಕಾಣುವುದು ಶಿರಸಿ ತಲುಪಿದ ನಂತರವೇ.

ಸ್ವಲ್ಪ ತಾವು ಈ ಬದಿಗೆ ಕುಳ್ಳಬಹುದಾ? ನನಗೆ ವಾಮಿಟ್ಟು ಬಂದಹಾಗೆ ಅನಿಸುತ್ತೆ, ಅಂದಾಗಲೆ ಪರಮಾಶ್ರ?ಯ ತೇಟ್ ಅವಳಂತೆಯೇ! ಹಾಲಿನಂತ ಬಣ್ಣದ ಮೈ, ಬಟ್ಟಲು ಕಣ್ಣು, ಹಿಗ್ಗಿದೆದೆ, ಒತ್ತಾಯ ಪರ?ವಕವಾಗಿ ವಸ್ತ್ರದಲ್ಲಿ ಮುಚ್ಚಿಟ್ಟಂತಹ ದೇಹಸಿರಿ ಅವಳನ್ನು ತದೇಕಚಿತ್ತದಿಂದ ನೋಡುತ್ತಿದ್ದ ನನಗೆ, ಪ್ಲೀಜ್....... ಆಗಬಹುದಾ, ಎಂದಾಗಲೆ ತಡವರಿಸಿಕೊಂಡು ಹಾಂ..... ಇಟ್ಸ್ ಓಕೆ ಈ ಕಡೆ ಬನ್ನಿ ಎಂದದ್ದಷ್ಟೇ. ನಿದ್ದೆಯ ಮಂಪರಿನಲ್ಲಿದ್ದ ನನ್ನನ್ನು ಬಡಿದೆಬ್ಬಿಸಿದಂತಹ ಚಲುವಿನ ಅವಳು, ಅವಳೇ.. ನೋ ಡೌಟ್,

ಯಾರನ್ನು ನೋಡ ಬೇಕೆಂದು ಹೊರಟಿದ್ದೆನೊ ಅವಳೆ! ಅದೂ ಒಂದೇ ಸೀಟಿನಲ್ಲಿ ಪಕ್ಕದಲ್ಲಿಯೇ! ಕನ್ನಡದ ಕರಾವಳಿ ಮತ್ತು ಬಯಲುನಾಡಗಳ ನಡುವಿನ ಅಂತರ ಕೇವಲ ಒಂದು ನಡುವಿನಷ್ಟೇ ಅನಿಸಿದ್ದು ಸುಳ್ಳಲ್ಲ! ಪಶ್ಚಿಮ ಘಟ್ಟದ ಏರು ಇಳುವುಗಳಲ್ಲವನ್ನು ಬಸ್ಸಿನ ಜೊತೆ ಜೊತೆಯಲ್ಲೇ ಒಮ್ಮೆಲೆ ಹತ್ತಿ ಇಳಿದಂತಹ ಆನಂದ!

ಅವಳ ಅಡಿಯಿಂದ ಮುಡಿಯವರಗಿನ ನನ್ನ ಚಾರಣ ಮುಗಿಯುವ ಹೊತ್ತಿಗೆ ಬಸ್ಸು ಶರ?ಸಿ, ಹಾವೇರಿ ಗುತ್ತಲ ದಾಟಿ ಮೈಲಾರ ಹೊಳಲು ಮೇಲಾಸಿ ಹಡಗಲಿ ತಲುಪಿತ್ತು, ಇನ್ನೇನು ಕೆಳಗಿಳಿಯಲು ಎದ್ದುನಿಂತ ನನಗೆ ಆಶ್ರ?ಯ, ವಿಚಿತ್ರ, ಭ್ರಮ ನಿರಸ ಅನ್ನುವಂತಾಗಿದ್ದು ಆ ಕಾರಣಕ್ಕಾಗಿ, ಅದೇ... "ಕಣ್ಣಿಗೆ ಅಲ್ಲದಿದ್ದರೂ ಕರುಳಿಗಾದರೂ ಗೊತ್ತಾಗಲಿಲ್ಲವೇ"! ನನ್ನ ನೋಡಿಯೂ ನೊಡದಂತೆ ಬರಬರನೆ ಕೆಳಗಿಳಿದು ಹೊರಟು ಹೋದಳು! ಇರಲಿ ಊರಿಗೆ ಬಂದವಳು.... ಕೆರೆಯ ಏರಿಗೆ ಬರಲಾರಳೆ...? ಅವಳು ಬಸ್ಸಿನಿಂದ ಇಳಿದ ನಂತರ ಸ್ವಲ್ಪ ಸಮಯ ಬಿಟ್ಟು ಅವಳ ಹಿಂದೆಯೇ ಕೆಳಗಿಳಿದ ದಡೂತಿಯೊಬ್ಬ ಬ್ಯಾಗನ್ನು ಹಿಡಿದು ಅವಳಿಗೆ ದಾರಿತೋರಿಸುತ್ತಾ ಮುಂದೆ ಮುಂದೆ ಹೊಗುತಿದ್ದ, ನಾನು ತುಸು ದೂರದಲ್ಲೇ ನಿಂತು ಅವನನ್ನು ಒಳಗೊಂಡಂತೆ ಅವಳನ್ನು ಗಮನಿಸತೊಡಗಿದೆ.

ಮುಂದುವರೆಯಲಿದೆ.........

## ಕವಿ ಮನಸು

### ಅಲೆಮಾರಿಗಳು

ಊರೇ ಇಲ್ಲದ ಜನ ಇವರು
ಶಹರಗಳ ಮುಖ ನೋಡದವರು
ಧೂಳು ತುಂಬಿದ ರಸ್ತೆಗಳಲಿ
ಮುಖಕ್ಕೆ ಧೂಳು ಮೆತ್ತಿಕೊಂಡವರು
ತಗ್ಗು ದಿನ್ನಿ ಹತ್ತಿಳಿಯುತ ನಡೆಯುವರು
ಕೆಲಸ ಮಾಡದೇ ಇರುವವರು
ಸಿಕ್ಕಷ್ಟೇ ತಿಂದು ಬದುಕುವರು
ಪ್ರಖರವಾದ ಬಿಸಿಲಾದರೂ
ಕೊರೆವ ಚಳಿಯಾದರೂ
ಅತೀ ಮಳೆ ಸುರಿದರೂ
ಕೊಲ್ಮಂಚು ಗುಡುಗು ಸಿಡಿಲು
ಏನಾದರೂ ಚಿಂತೆ ಮಾಡದವರು
ಇವರಿಗೆ ಸೂರು ಗುಡಿಸಲು ಜೋಪಡಿ
ಸೂರು ಹೋದರೂ ಎದೆಗುಂದದವರು
ಬಂಗಾರದೊಡವೆ ಕಾಣದವರು
ಅಂದಿನ ದಿನ ಅಂದಿಗೆ ನಾಳಿನ ದಿನ ನಾಳೆಗೆ
ಭವಿಷ್ಯದ ಚಿಂತೆ ಇವರಿಗಿಲ್ಲ
ಸಿಕ್ಕಷ್ಟು ತಿಂದು ಹಾಸಿಗೆ ಹಾಸಿ
ಮಕ್ಕಳ ಪಡೆಯುವರು
ಮಕ್ಕಳ ಬದುಕಿನ ಚಿಂತೆ ಇಲ್ಲದವರು
ಶಾಲೆ ಪಾಠ ಬೇಕಿಲ್ಲ
ಅಪ್ಪ ಅಮ್ಮ ಬದುಕಿದಂತೆ
ಮಕ್ಕಳು ಬದುಕುತ್ತಾರೆ
ಇವರ ಜೀವನವೇ ಇವರಿಗೆ ಸುಖ
ನೋಡಿದವರಿಗೆ ಇವರ ಬದುಕು
ನರಕದಂತೆ ಕಂಡರೂ ಅವರಿಗೆ
ಅವರ ಬದುಕೆ ಅದೇ ಬೃಂದಾವನ.

– **ಚಂದ್ರಶೇಖರಯ್ಯ** ರೋಣದಮಠ

## ಪೋಕ್ಸೋ ಪ್ರಕರಣ: ಆರೋಪಿಗಳಿಗೆ 10 ವರ್ಷಗಳ ಜೈಲು ಶಿಕ್ಷೆ ಪ್ರಕಟ

**ಹಂಪಿ ಟೈಮ್ಸ್ ಕೊಪ್ಪಳ**

ಅಪ್ರಾಪ್ತ ವಯಸ್ಸಿನ ಬಾಲಕಿಯನ್ನು ಅಪಹರಿಸಿ, ಅತ್ಯಾಚಾರ ಎಸಗಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿಗಳಿಗೆ 10 ವರ್ಷಗಳ ಜೈಲು ಶಿಕ್ಷೆ ವಿಧಿಸಿ ಕೊಪ್ಪಳ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯ ಹಾಗೂ ತ್ವರಿತ ವಿಲೇವಾರಿ ನ್ಯಾಯಾಲಯ(ಪೋಕ್ಸೋ)ವು ತೀರ್ಪು ಪ್ರಕಟಿಸಿದೆ.

ಕೊಪ್ಪಳದ ಮುನಿರಾಬಾದ್ ಠಾಣೆ ವ್ಯಾಪ್ತಿಯ ಹುಲಗಿಯ ಹುಲಿಗೆಮ್ಮ ದೇವಸ್ಥಾನ ಹತ್ತಿರ ಜಾತ್ರೆ ಸಲುವಾಗಿ ಹಾಕಿದ ಮನರಂಜನೆ ಆಟದ ತೊಟ್ಟಿಲು ಹತ್ತಿರ ಹಾಗೂ ರೈಲ್ವೆ ಹಳಿ ಪಕ್ಕದಲ್ಲಿ ಪ್ಲಾಸ್ಟಿಕ್ ಬಾಟಲಿಗಳನ್ನು ಆರಿಸುತ್ತಿದ್ದ ಅಪ್ರಾಪ್ತ ಬಾಲಕಿಯನ್ನು ಕಂಡ ಅಪರಾಧಿಗಳಾದ ಎ-1 ಶಬ್ಬೀರ, ಎ-2 ಕಾರ್ತಿಕ ಈ ಇಬ್ಬರೂ ದುಡ್ಡು ಕೊಡುತ್ತೇವೆ ನಮ್ಮೊಂದಿಗೆ ಬಾ ಎಂದು ಬಾಲಕಿಯನ್ನು ಅಪಹರಿಸಿ, ಒತ್ತಾಯ ಪೂರ್ವಕವಾಗಿ ಕರೆದುಕೊಂಡು ಹೋಗಿ ಅವಳಿಗೆ ಐಸ್ ಕ್ರೀಮ್, ಚಾಕಲೇಟ್ ಕೊಟ್ಟು ತುಂಗಭದ್ರಾ ಹೊಳೆ ಹಿಂದೆ ಹೊಸೂರು ರಸ್ತೆಯಲ್ಲಿರುವ ಒಂದು ಕಬ್ಬಿನ ಗದ್ದೆಗೆ ಕರೆದುಕೊಂಡು ಹೋಗಿ ಅಲ್ಲಿ ಅಪರಾಧಿಗಳು ಬಾಧಿತಳ ಮೇಲೆ ಬಲವಂತದ ಅತ್ಯಾಚಾರ ಮಾಡಿದ ಆರೋಪ ತನಿಖೆಯಲ್ಲಿ ಸಾಭಿತಾಗಿದ್ದರಿಂದ ಕೊಪ್ಪಳ ಪೊಲೀಸ್ ಉಪಾಧೀಕ್ಷಕರಾದ ಶ್ರೀಕಾಂತ ಕಟ್ಟಿಮನಿ ಅವರು ಅಪರಾಧಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ಪ್ರಕರಣವು ವಿಚಾರಣೆಯಲ್ಲಿ ಅಪರಾಧಿಗಳ ಮೇಲಿನ ಆರೋಪಣೆಗಳು ಸಾಭೀತಾಗಿದೆ ಎಂದು 10 ವರ್ಷಗಳ ಜೈಲು ಶಿಕ್ಷೆ ಹಾಗೂ ರೂ.35,000 ಗಳ ದಂಡವನ್ನು ವಿಧಿಸಿ, ಕೊಪ್ಪಳ ಹೆಚ್ಚುವರಿ ಜಿಲ್ಲಾ ಹಾಗೂ ಸತ್ರ ನ್ಯಾಯಾಧೀಶರು ಹಾಗೂ ತ್ವರಿತ ವಿಲೇವಾರಿ (ಪೋಕ್ಸೋ) ನ್ಯಾಯಾಧೀಶರಾದ ಕುಮಾರ ಡಿ.ಕೆ. ಅವರು ತೀರ್ಪು ಹೊರಡಿಸಿರುತ್ತಾರೆ. ಪ್ರಕರಣದಲ್ಲಿ ಸರ್ಕಾರದ ಪರವಾಗಿ ಪ್ರಧಾನ ಸರ್ಕಾರಿ ಅಭಿಯೋಜಕರಾದ ಬಂಡಿ ಅಪರ್ಣಾ ಮನೋಹರ ಅವರು ವಾದ ಮಂಡಿಸಿದ್ದರು ಎಂದು ನ್ಯಾಯಾಲಯದ ಪ್ರಕಟಣೆ ತಿಳಿಸಿದೆ.

### ಓದುರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

**– ಜಾಹೀರಾತು ವ್ಯವಸ್ಥಾಪಕರು.**

# ಕುಡಿಯುವ ನೀರು ಪೂರೈಕೆಗೆ ಆದ್ಯತೆ ನೀಡಿ


## ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿಕೆ । ಬರ ನಿರ್ವಹಣೆ, ಕುಡಿಯುವ ನೀರು ಪೂರೈಕೆ ಪ್ರಗತಿ ಪರಿಶೀಲನಾ ಸಭೆ

**ಹಂಪಿ ಟೈಮ್ಸ್ ಕೊಪ್ಪಳ**

ಜಿಲ್ಲೆಯ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ವ್ಯತ್ಯಯವಾಗಬಾರದು. ಸಮಸ್ಯಾತ್ಮಕ ಗ್ರಾಮಗಳಲ್ಲಿ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳೊಂದಿಗೆ ಕುಡಿಯುವ ನೀರು ಪೂರೈಸಲು ಮೊದಲ ಆದ್ಯತೆ ನೀಡಿ ಎಂದು ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಅಧಿಕಾರಿಗಳಿಗೆ ತಿಳಿಸಿದರು.

ಶುಕ್ರವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಬರ ನಿರ್ವಹಣೆ ಮತ್ತು ಕುಡಿಯುವ ನೀರು ಪೂರೈಕೆ ಕುರಿತ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗ್ರಾಮ ಹಾಗೂ ನಗರ ಪ್ರದೇಶಗಳಲ್ಲಿ ಸರ್ಕಾರಿ ಬೋರ್‌ವೆಲ್‌ಗಳಿಂದ ಕುಡಿಯುವ ನೀರು ಸರಬರಾಜು ಮಾಡಬೇಕು. ಒಂದು ವೇಳೆ ಸರ್ಕಾರಿ ಬೋರ್‌ವೆಲ್‌ಗಳಲ್ಲಿ ಇಳುವರಿ ಕಡಿಮೆಯಾಗಿದ್ದಲ್ಲಿ ಖಾಸಗಿ ಬೋರ್‌ವೆಲ್‌ಗಳೊಂದಿಗೆ ಒಪ್ಪಂದ ಮಾಡಿಕೊಂಡು ನೀರು ಸರಬರಾಜು ಮಾಡಬೇಕು. ಜೂನ್ 30 ರವರೆಗೂ ಕುಡಿಯುವ ನೀರಿನ ತೊಂದರೆ ಬರದಂತೆ ಎಚ್ಚರಿಕೆ ಕ್ರಮ ವಹಿಸಬೇಕು. ಅಗತ್ಯ ಪರಿಸ್ಥಿತಿಗಳಲ್ಲಿ ಹೊಸ ಬೋರ್‌ವೆಲ್‌ಗಳನ್ನು ಕೊರೆಸಿ ನೀರು ಪೂರೈಕೆಗೆ ಅವಕಾಶವಿದ್ದು, ಸ್ಥಳೀಯ ಜನಸಂಖ್ಯೆಗೆ ಅನುಗುಣವಾಗಿ ಬೇಡಿಕೆ ಅನುಸಾರ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಿ. ಕುಡಿಯುವ ನೀರು ಪೂರೈಕೆ ಮೊದಲ ಆದ್ಯತೆ ಆಗಬೇಕು ಎಂದು ಪಿಡಿಒಗಳಿಗೆ ತಿಳಿಸಿದರು.



ನಗರ ಪ್ರದೇಶಗಳಲ್ಲಿ ನೀರಿನ ಆಕರಗಳ ಸಂಗ್ರಹಣೆ ಸಾಮರ್ಥ್ಯ, ಪರ್ಯಾಯ ನೀರಿನ ಮೂಲಗಳನ್ನು ಬಳಸಿಕೊಂಡು ಯೋಜನೆ ರೂಪಿಸಿ, ಇನ್ನೂ 3 ತಿಂಗಳುಗಳ ಕಾಲ ನೀರು ಪೂರೈಕೆಗೆ ಸಮಸ್ಯೆಯಾಗದಂತೆ ಎಚ್ಚರಿಕೆ ವಹಿಸಿ. ತುಂಗಭದ್ರಾ ನದಿ ನೀರನ್ನು ಕುಡಿಯುವ ಉದ್ದೇಶಕ್ಕೆ ಮಾತ್ರ ಬಳಸುವಂತೆ ನಿರ್ದೇಶನವಿದ್ದು, ಇದನ್ನು ಯಾರೂ ಮೀರಬಾರದು, ಕುಡಿಯುವ ನೀರಿನ ಹೊರತಾಗಿ ಬೇರೆ ಉದ್ದೇಶಕ್ಕೆ ನದಿ ನೀರನ್ನು ಬಳಸುವುದು ಕಂಡುಬಂದಲ್ಲಿ ವಿಪತ್ತು ನಿರ್ವಹಣಾ ಪ್ರಾಧಿಕಾರದ ಕಾಯ್ದೆಯನ್ವಯ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುತ್ತದೆ. ಹಾಗೂ ಕುಡಿಯುವ ನೀರಿನ ಸಮಸ್ಯೆಯ ದೂರು ದಾಖಲಿಸಲು ಎಲ್ಲ ನಗರ ಸ್ಥಳೀಯ ಸಂಸ್ಥೆಗಳ ಕಚೇರಿಯಲ್ಲಿ ಸಹಾಯವಾಣಿಯನ್ನು ತೆರೆಯಲಾಗಿದ್ದು, ದಾಖಲಾಗುವ ದೂರುಗಳನ್ನು ವಹಿಯಲ್ಲಿ ದಾಖಲಿಸಿಕೊಂಡು, ಕೂಡಲೇ ಕ್ರಮ ವಹಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲೆಯಲ್ಲಿ ಹೋಬಳಿವಾರು ಜಾನುವಾರು, ಕುರಿ ಮೇಕೆಗಳ ಸಂಖ್ಯೆಯ ಮಾಹಿತಿಯನ್ನು ಪಶು ಸಖಿ ಅವರಿಂದ ಪಡೆದು, ಜಿಲ್ಲೆಯಲ್ಲಿ ಸದ್ಯಕ್ಕೆ ಇರುವ ಮೇವು ದಾಸ್ತಾನು ಹಾಗೂ ಮುಂದಿನ ದಿನಗಳಲ್ಲಿ ಬರಬಹುದಾದ ಬೇಡಿಕೆಯ ವರದಿಯನ್ನು ಸಿದ್ದಪಡಿಸಿ. ಪ್ರತಿ ವಾರ ಪಶು ಸಖಿ ಅವರಿಂದ ನಿಖರ ಮಾಹಿತಿ ಪಡೆದು ಮೇವು ದಾಸ್ತಾನು ಪರಿಶೀಲಿಸಿ. ಅಗತ್ಯವಿದ್ದಲ್ಲಿ ಮೇವು ಖರೀದಿಗೆ ಕ್ರಮ ಕೈಗೊಳ್ಳಲಾಗುತ್ತದೆ. ರೈತರಿಗೆ ಮೇವು ಕಿಟ್‌ಗಳನ್ನು ವಿತರಿಸಲು ಕ್ರಮ ಕೈಗೊಳ್ಳಿ. ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಸಂದರ್ಭದಲ್ಲಿ ಜನಸಂಖ್ಯೆ ಮಾತ್ರವಲ್ಲದೆ, ಗ್ರಾಮದ ಜಾನುವಾರು, ಕುರಿ ಮೇಕೆಗಳಿಗೆ ಬೇಕಾಗುವ ನೀರಿನ ಪ್ರಮಾಣವನ್ನು ಆಧರಿಸಿ ನೀರು ಸರಬರಾಜು ಮಾಡಬೇಕು ಎಂದು ಸಂಬಂಧಿಸಿದ ಇಲಾಖಾ ಅಧಿಕಾರಿಗಳಿಗೆ ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೆಯ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಜಿಲ್ಲಾ ಪಂಚಾಯತಿಯ ಮುಖ್ಯ ಯೋಜನಾಧಿಕಾರಿ ಡಿ.ಮಂಜುನಾಥ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ರೇಷ್ಮಾ ಹಾನಗಲ್, ಜಂಟಿ ಕೃಷಿ ನಿರ್ದೇಶಕರಾದ ರುದ್ರೇಶಪ್ಪ ಟಿ. ಸೇರಿದಂತೆ ಎಲ್ಲ ತಾಲ್ಲೂಕುಗಳ ತಹಶೀಲ್ದಾರರು, ತಾ.ಪಂ. ಕಾರ್ಯ ನಿರ್ವಹಣಾಧಿಕಾರಿಗಳು, ಮುಖ್ಯಾಧಿಕಾರಿಗಳು, ಪಿಡಿಒಗಳು, ಉಪಸ್ಥಿತರಿದ್ದರು.

## ನಿತ್ಯ ಪಂಚಾಂಗ

ಮಾಸ: ಪಾಲ್ಗುಣ । ಸಂವತ್ಸರ: ಶೋಭಾಕೃತ

**24–03–2024 – ಭಾನುವಾರ**

| | |
|---|---|
| ತಿಥಿ | : ಚತುರ್ದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಪೂರ್ವ ಫಾಲ್ಗುಣಿ |
| ಯೋಗ | : ಗಂಡ |
| ಕರಣ | : ವಾಣಿಜ |
| ಸೂರ್ಯೋದಯ | : 06:27:59 |
| ಸೂರ್ಯಾಸ್ತ | : 18:38:23 |
| ರಾಹು | : 17:07–18:38 |
| ಯಮಘಂಡ | : 12:33–14:04 |
| ಗುಳಿಕ | : 15:36–17:07 |

## ತುಂಗಭದ್ರಾ ನೀರಿನ ಮಟ್ಟ



ಶನಿವಾರ : 23–03–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1581.94 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 744 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 5.484 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1592.2 ಅಡಿ |
| ಒಳ ಹರಿವು | 2191 ಕ್ಯುಸೆಕ್ |
| ಹೊರ ಹರಿವು | 8622 ಕ್ಯುಸೆಕ್ |
| ಸಾಮರ್ಥ್ಯ | 12.987 ಟಿಎಂಸಿ |

# ಬೂತ್ ಮಟ್ಟದಲ್ಲಿ ಸಂಘಟನೆ ಬಲಗೊಳಿಸಿ

## ಬಿಜೆಪಿ ಅಭ್ಯರ್ಥಿ ಬಿ. ಶ್ರೀರಾಮುಲು ಹೇಳಿಕೆ । ಕೂಡ್ಲಿಗಿಯಲ್ಲಿ ವಿಜಯ ಅಭಿಯಾನ

■ ಹಂಪಿ ಟೈಮ್ಸ್ ಕೂಡ್ಲಿಗಿ

ಮುಂದಿನ ವಿಧಾನ ಸಭಾ ಚುನಾವಣೆಯಲ್ಲಿ ಈ ಕ್ಷೇತ್ರದಲ್ಲಿ ಸ್ಥಳೀಯರಿಗೇ ಟಿಕೆಟ್ ನೀಡಲಾಗುವುದು ಎಂದು ಬಳ್ಳಾರಿ ಲೋಕಸಭಾ ಬಿಜೆಪಿ ಅಭ್ಯರ್ಥಿ ಬಿ. ಶ್ರೀರಾಮುಲು ಹೇಳಿದರು.

ಪಟ್ಟಣದ ಹಿರೇಮಠ ಕಲ್ಯಾಣ ಮಂಟಪದಲ್ಲಿ ಶುಕ್ರವಾರ ಬಿಜೆಪಿ ಮಂಡಲದ ವತಿಯಿಂದ ಹಮ್ಮಿಕೊಂಡಿದ್ದ ಬೂತ್ ವಿಜಯ ಅಭಿಯಾನ ಸಭೆಯಲ್ಲಿ ಮಾತನಾಡಿದರು. ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಬೇರೆ ಬೇರೆ ಕಾರಣಗಳಿಂದ ಬಿಜೆಪಿ ಸೋಲು ಕಂಡಿದೆ. ಕಳೆದ ಲೋಕಸಭಾ ಚುನಾವಣೆಗಳಲ್ಲಿ ಕೂಡ್ಲಿಗಿ ಕ್ಷೇತ್ರದಿಂದ ಅಧಿಕ ಮತಗಳನ್ನು ಬಂದಿವೆ.

ಪಕ್ಷದಿಂದ ದೂರ ಉಳಿದವರನ್ನು, ಪಕ್ಷ ಬಿಟ್ಟು ಹೋದವರನ್ನು ಮತ್ತೆ ಪಕ್ಷಕ್ಕೆ ಕರೆ ತಂದು ಬೂತ್ ಗಟ್ಟಿ ಮಾಡಬೇಕಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಬಂದಾಗ ಬರ ಬಂದು ಜಾನುವಾರುಗಳಿಗೂ ಮೇವು ಸಿಗುತ್ತಿಲ್ಲ. ಜನರು ಗುಳೇ ಹೋಗುತ್ತಿದ್ದಾರೆ. ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರ ಜನರಿಗೆ ಶಾಪವಾಗಿ ಕಾಡುತ್ತಿದೆ ಎಂದರು.

ಎಸ್ಟಿ ಮೋರ್ಚಾ ರಾಜ್ಯಾಧ್ಯಕ್ಷ ಬಂಗಾರು ಹನುಮಂತು ಮಾತನಾಡಿ, ಕಳೆದ ಮೂರು ಚುನಾವಣೆಯಲ್ಲಿ ಕ್ಷೇತ್ರದ ಹೊರಗಿನ ಅಭ್ಯರ್ಥಿಗಳನ್ನು ಗೆಲ್ಲಿಸಿ ಕಳಿಸಿದ್ದೇವೆ. ಆದರೆ ಕಳೆದವಿಧಾನಸಭಾಚುನಾವಣೆಯಲ್ಲಿಯಾದರೂ ಸ್ಥಳೀಯರಿಗೆ ಟಿಕೆಟ್ ನೀಡಲಾಗುತ್ತದೆ ಎಂದು ಭಾವಿಸಿದ್ದೇವು. ಆದರೆ ಎಲ್ಲೋ ಇದ್ದವರು, ಪರಿಶಿಷ್ಟ ಪಂಗಡಕ್ಕೆ ಸೇರದೆ ಇರುವವರಿಗೆ ಪಕ್ಷ ಅಭ್ಯರ್ಥಿಯನ್ನಾಗಿ ಮಾಡಿತು. ಇದರಿಂದ ಕೂಡ್ಲಿಗಿ ವಿಧಾನ ಸಭಾ ಚುನಾವಣೆಯಲ್ಲಿ ಬಿಜೆಪಿ ಸೋಲು ಕಾಣಬೇಕಾಯಿತು. ಮುಂದಿನ ಚುನಾವಣೆಯಲ್ಲಾದರೂ ಸ್ಥಳೀಯರಿಗೆ ಟಿಕೆಟ್ ನೀಡಬೇಕು ಎಂದು ಒತ್ತಾಯಿಸಿದರು.

ವಿಧಾನ ಪರಿಷತ್ ಸದಸ್ಯ ರವಿಕುಮಾರ್, ಜಿಲ್ಲಾಧ್ಯಕ್ಷ ಚನ್ನಬಸವನಗೌಡ ಪಾಟೀಲ್, ಪ್ರಧಾನ ಕಾರ್ಯದರ್ಶಿಗಳಾದ ಸೂರ್ಯಪಾಪಣ್ಣ, ರೇಖಾ ಮಲ್ಲಿಕಾರ್ಜುನ, ಮಂಡಲ ಅಧ್ಯಕ್ಷ ಕೆ. ನಾಗರಾಜ, ರೈತ ಮೋರ್ಚಾದ ಜಿಲ್ಲಾಧ್ಯಕ್ಷ ಎಚ್. ರೇವಣ್ಣ, ಮುಖಂಡರಾದ ಸಿದ್ಧಾರ್ಥ ಸಿಂಗ್, ಬಿ.ಭೀಮೇಶ್, ಎಸ್.ಪಿ.ಪ್ರಕಾಶ್, ಮೊರಬ ಶಿವಣ್ಣ, ಎಸ್. ದುರುಗೇಶ್, ಓದೋ ಗಂಗಪ್ಪ, ಸಾಣೆಹಳ್ಳಿ ಹನುಮಂತು, ಮಂಜುನಾಥ ನಾಯಕ, ಬೆಳಕಟ್ಟೆ ಕಲ್ಲೇಶಗೌಡ ಪಾಲ್ಗೊಂಡಿದ್ದರು.



# 629.94 ಲೀ. ಮದ್ಯ, ರೂ.26 ಲಕ್ಷ ನಗದು, ಗಾಂಜಾ ವಶ: ಡಿಸಿ

■ ಹಂಪಿ ಟೈಮ್ಸ್ ಬಳ್ಳಾರಿ

ಲೋಕಸಭೆ ಸಾರ್ವತ್ರಿಕ ಚುನಾವಣೆ ಅಂಗವಾಗಿ ಜಿಲ್ಲೆಯಾದ್ಯಂತ ಮಾದರಿ ನೀತಿ ಸಂಹಿತೆಯು ಕಟ್ಟುನಿಟ್ಟಾಗಿ ಜಾರಿಯಾಗಿದ್ದು, ಶುಕ್ರವಾರದಂದು ಮಾದರಿ ನೀತಿ ಸಂಹಿತೆ ಉಲ್ಲಂಘಿಸಿ ಅನಧೀಕೃತವಾಗಿ ಸಾಗಿಸುತ್ತಿದ್ದ 629.94 ಲೀಟರ್ (ರೂ.2,53,141 ಮೌಲ್ಯ) ಮದ್ಯ, ರೂ.26 ಲಕ್ಷ ನಗದು ಹಣ ವಶಪಡಿಸಿಕೊಂಡು ಪ್ರಕರಣ ದಾಖಲಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ತಿಳಿಸಿದ್ದಾರೆ.

ಸಂಡೂರು ತಾಲ್ಲೂಕಿನ ಚೋರನೂರು ಬಳಿ ಅಕ್ರಮವಾಗಿ ಸಾಗಾಣೆ ಮಾಡುತ್ತಿದ್ದ 130 ಗ್ರಾಂ (ರೂ.4500 ಮೌಲ್ಯದ) ಗಾಂಜಾ ಮತ್ತು ಬಳ್ಳಾರಿ ನಗರ ವ್ಯಾಪ್ತಿಯಲ್ಲಿ ರೂ.26 ಲಕ್ಷ ನಗದು ಹಣ, ದ್ವಿಚಕ್ರ ವಾಹನ ವಶಪಡಿಸಿಕೊಳ್ಳಲಾಗಿದೆ. ಅಬಕಾರಿ ಪೊಲೀಸ್ ಅಧಿಕಾರಿಗಳಿಂದ 500.87 ಲೀಟರ್ (ರೂ.195960 ಮೌಲ್ಯ) ಮದ್ಯ ಮತ್ತು ಪೊಲೀಸ್ ಇಲಾಖೆ ಅಧಿಕಾರಿಗಳಿಂದ 129.07 ಲೀಟರ್ (ರೂ.57181 ಮೌಲ್ಯ) ಮದ್ಯ ಮತ್ತು ಒಂದು ವಾಹನ (ರೂ.50 ಸಾವಿರ ಮೌಲ್ಯ) ವಶಪಡಿಸಿಕೊಳ್ಳಲಾಗಿದೆ. ಈವರೆಗೆ ಒಟ್ಟು 44 ಪ್ರಕರಣ ದಾಖಲಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

# ಶ್ರೀ ರೇಣುಕಾಚಾರ್ಯ ಜಯಂತಿ ಆಚರಣೆ



■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಶ್ರೀ ರೇಣುಕಾಚಾರ್ಯ ಜಯಂತಿಯನ್ನು ಶನಿವಾರ ಸರಳವಾಗಿ ಆಚರಿಸಲಾಯಿತು. ಲೋಕಸಭೆ ಸಾರ್ವತ್ರಿಕ ಚುನಾವಣೆ–2024ರ ಅಂಗವಾಗಿ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ನಗರದ ಡಾ.ರಾಜ್‌ಕುಮಾರ್ ರಸ್ತೆಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹೊಂಗಿರಣ ಭವನದಲ್ಲಿ ಶ್ರೀ ರೇಣುಕಾಚಾರ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಸರಳ ಹಾಗೂ ಸಾಂಕೇತಿಕವಾಗಿ ಆಚರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ ಮತ್ತು ವೀರಶೈವ ಲಿಂಗಾಯತ ಸಮಾಜ ಮುಖಂಡರಿದ್ದರು.

# ದಾಹ ತಣಿಸಲಿವೆ ನೀರಿನ ಅರವಟ್ಟಿಗೆ

## ಜನಕಾಳಜಿ ಇರುವ ಜಿಲ್ಲಾಧಿಕಾರಿ, ಮುಖ್ಯಾಧಿಕಾರಿಗೆ ಸಾರ್ವಜನಿಕರಿಂದ ಮೆಚ್ಚುಗೆ




■ ಹಂಪಿ ಟೈಮ್ಸ್ ಕೊಟ್ಟೂರು

ಜಿಲ್ಲಾಧಿಕಾರಿಗಳ ಸೂಚನೆ ಮೇರೆಗೆ ಪ.ಪಂ ಮುಖ್ಯಾಧಿಕಾರಿ ತುಕಾರಾಮ ಯಮನಪ್ಪ ಮಾದರ ಅವರು ಪಟ್ಟಣದ ಸಾರ್ವಜನಿಕ ಸ್ಥಳಗಳಲ್ಲಿ ಕುಡಿಯುವ ನೀರಿನ ಅರವಟ್ಟಿಗೆ ಪ್ರಾರಂಭಿಸಿ, ಬಿಸಿಲಿಗೆ ಬಾಯಾರಿದ ದಾರಿ ಓಕರಿಗೆನೀರಿನದಾಹನೀಗಿಸಿಸಾರ್ವಜನಿಕರಿಂದ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ತುಕಾರಾಮ ಯಮನಪ್ಪ ಮಾದರ ಮಾತನಾಡಿ ವಿಜಯನಗರ ಜಿಲ್ಲೆಯಲ್ಲಿ ಬಿಸಿಲಿನ ತಾಪ ಹೆಚ್ಚಾಗುತ್ತಿರುವ ಹಿನ್ನೆಲೆ ಜನ ಕಾಳಜಿ ಹೊಂದಿರುವ ಮಾನ್ಯ ಜಿಲ್ಲಾಧಿಕಾರಿಗಳು ಎಂ.ಎಸ್ ದಿವಾಕರ್ ಅವರು ನಗರ ಮತ್ತು ಸ್ಥಳೀಯ ಪ್ರದೇಶಗಳಲ್ಲಿ

ಜನ ಸಂದಣಿ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅರವಟ್ಟಿಗೆಗಳನ್ನು ತೆರೆಯುವಂತೆ ಸೂಚಿಸಿದ ನಿಮಿತ್ತ ಅರವಟ್ಟಿಗೆಯನ್ನು ಇಂದು ತೆರೆಯಲಾಗಿದೆ ಎಂದರು.

ನಗರದಲ್ಲಿ ಬಿಸಿಲಿನ ಪ್ರಕರತೆ ಹೆಚ್ಚಿರುವ ಕಾರಣ ಪಟ್ಟಣದ ಕೆಲ ಪ್ರಜ್ಞಾವಂತ ನಾಗರಿಕರು, ಸ್ವ ಇಚ್ಛೆಯಿಂದ ಅಲ್ಲಲ್ಲಿ ನೀರಿನ ಅರವಟ್ಟಿಗೆ ಪ್ರಾರಂಭಿಸಿದ್ದಾರೆ ಆ ಸ್ಥಳಗಳನ್ನು ಹೊರತು ಪಡಿಸಿ ಪಟ್ಟಣದ ಉಜ್ಜಿನಿ ಸರ್ಕಲ್ ಮತ್ತು ಹರಪನಹಳ್ಳಿ ಮಾರ್ಗದ ಪಟ್ಟಣ ಪಂಚಾಯತಿ ಮುಂಭಾಗದಲ್ಲಿ ಪಪಂ ವತಿಯಿಂದ ಸಾರ್ವಜನಿಕರಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿದ್ದೇವೆ ಎಂದರು.

ಅರವಟ್ಟಿಗೆ ಚಾಲನೆ ವೇಳೆ ಪಟ್ಟಣ ಪಂಚಾಯತಿ ಎಂಜಿನಿಯರ್ ಸಲೊಮಿ ನಿಹಾರಿಕ ,ಪಪಂ ಆರೋಗ್ಯ ನಿರೀಕ್ಷಕರು ಅನುಷಾ,ಪೌರ ಕಾರ್ಮಿಕರು ಮಾದೂರ ಕೊಟ್ರೇಶ್, ಮಹಾದೇವಪ್ಪ ಮತ್ತು ಪಪಂ ಸಿಬ್ಬಂದಿ ವರ್ಗ ಸಾರ್ವಜನಿಕರು ಇದ್ದರು.

> ಪಟ್ಟಣದಲ್ಲಿ ನೀರಿನ ಅಭಾವ ಇರುವ ನಿಮಿತ್ತ ಹೋಟೆಲ್‌ಗಳಲ್ಲಿ, ನೀರು ಕೇಳಲು ಹೋದರೆ,ವ್ಯಾಪಾರ ಮಾಡುವವರಿಗೆ ನೀರು ಕೊಡುವುದು ಕಷ್ಟ, ಖಾಲಿ ಜನ್ರಿಗೆಲ್ಲಿ ಎನ್ನುತ್ತ ಬಳಕೆ ನೀರನ್ನೇ ತುಂಬಿಕೊಡುತಿದ್ದರು. ಬಿಸಿಲಿನ ಧಗೆಗೆ ಆ ನೀರನ್ನೇ ಸ್ವಲ್ಪ ಕುಡಿಯುವ ಸ್ಥಿತಿ ನಿರ್ಮಾಣವಾಗಿತ್ತು, ಮಾನ್ಯ ಜಿಲ್ಲಾಧಿಕಾರಿಗಳು ನಗರದಲ್ಲಿ ನೀರಿನ ಅರವಟ್ಟಿಗೆಗೆ ಸೂಚಿಸಿ ಪಟ್ಟಣಕ್ಕೆ ಬರುವ ಜನ್ರಿಗೆ ತಣ್ಣನೆಯ ಶುದ್ಧ ನೀರು ದೊರೆಯುವಂತೆ ಮಾಡಿದ್ದಾರೆ. ಅವರಲ್ಲಿ ಜನರ ಕಾಳಜಿ ಇದು ಎತ್ತಿತೋರಿಸುತ್ತೆ.
>
> **– ಬಸಮ್ಮ,** ಕೂಲಿಕೆಲಸಕ್ಕೆಂದು ಪಟ್ಟಣಕ್ಕೆ ಆಗಮಿಸುವ ಗ್ರಾಮೀಣ ಮಹಿಳೆ

# ಲೋಕಸಭೆ ಮಾದರಿ ನೀತಿ ಸಂಹಿತೆ ತರಬೇತಿ ಕಾರ್ಯಕ್ರಮ

■ ಹಂಪಿ ಟೈಮ್ಸ್ ಕೊಪ್ಪಳ

ಚುನಾವಣಾ ಮಾದರಿ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ಎಲ್ಲಾ ಅಧಿಕಾರಿಗಳು ಹಾಗೂ ತಂಡಗಳು ಅತ್ಯಂತ ಜಾಗೃತೆಯಿಂದ ಕಾರ್ಯನಿರ್ವಹಿಸಬೇಕು ಎಂದು ಎಂ.ಸಿ.ಸಿ ನೋಡಲ್ ಅಧಿಕಾರಿಗಳು ಹಾಗೂ ಕೊಪ್ಪಳ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ ಅವರು ಹೇಳಿದರು.

ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಶನಿವಾರ ಆಯೋಜಿಸಿದ್ದ ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಲೋಕಸಭಾ ಸಾರ್ವತ್ರಿಕ ಚುನಾವಣೆ–2024ರ ಸಂಬಂಧ ಮಾದರಿ ನೀತಿ ಸಂಹಿತೆ ಕುರಿತು ಪೊಲೀಸ್ ಅಧಿಕಾರಿಗಳು, ಚುನಾವಣೆ ಕರ್ತವ್ಯಕ್ಕೆ ನೇಮಕಗೊಂಡ ಸೆಕ್ಟರ್ ಅಧಿಕಾರಿಗಳು, ಎಸ್.ಎಸ್.ಟಿ ತಂಡ, ವಿಎಸ್ ಟಿ ತಂಡ, ಫ್ಲೈಯಿಂಗ್ ಸ್ಕ್ವಾಡ್, ಮಾದರಿ ನೀತಿ ಸಂಹಿತೆ ನೋಡಲ್ ಅಧಿಕಾರಿಗಳು, ಸಹಾಯಕ ಚುನಾವಣಾಧಿಕಾರಿಗಳು ಹಾಗೂ ಇತರೆ ಅಧಿಕಾರಿಗಳಿ ಸೂಚನೆ ನೀಡಿದರು.

# ನೀತಿ ಸಂಹಿತೆ ಉಲ್ಲಂಘನೆಯಾಗದಿರಲಿ

■ ಹಂಪಿ ಟೈಮ್ಸ್ ಬಳ್ಳಾರಿ

ರಾಜ್ಯದಲ್ಲಿ ಎರಡು ಹಂತದ ಲೋಕಸಭೆ ಸಾರ್ವತ್ರಿಕ ಚುನಾವಣೆ ನಡೆಯುತ್ತಿದ್ದು, ಚುನಾವಣೆ ಪ್ರಕ್ರಿಯೆಯಲ್ಲಿ ಕಾನೂನು ಹಾಗೂ ನೀತಿ ಸಂಹಿತೆ ಯಾವುದೇ ಕಾರಣಕ್ಕೂ ಉಲ್ಲಂಘನೆಯಾಗಬಾರದು. ಪ್ರತಿಯೊಬ್ಬರೂ ಜಾಗ್ರತೆ ವಹಿಸಬೇಕು ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಅವರು ಎಲ್ಲಾ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚನೆ ನೀಡಿದರು.ಅವರು ಶನಿವಾರದಂದು, ಲೋಕಸಭೆ ಸಾರ್ವತ್ರಿಕ ಚುನಾವಣೆ – 2024ರ ಸಂಬಂಧ ತಮ್ಮ ಕಚೇರಿಯಿಂದ ಎಲ್ಲಾ ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜಿಪಂ ಸಿಇಒ ಅಧಿಕಾರಿಗಳೊಂದಿಗೆ ವಿಡಿಯೋ ಸಂವಾದ ಸಭೆ ನಡೆಸಿ ಮಾತನಾಡಿದರು.ಈಗಾಗಲೇ ಲೋಕಸಭೆ ಚುನಾವಣೆಗೆ ವೇಳಾಪಟ್ಟಿ ಘೋಷಣೆಯಾಗಿದ್ದು, ಚುನಾವಣೆಗೆ ತೊಂದರೆ ಉಂಟು ಮಾಡುವ ಅಥವಾ ಅಹಿತಕರ ಘಟನೆ ಸೃಷ್ಟಿಸುವಂತಹ ರೌಡಿ ಶೀಟರ್, ಸಮಾಜ ವಿದ್ರೋಹಿಗಳ ಮೇಲೆ ನಿಗಾ ವಹಿಸಬೇಕು ಎಂದು ಎಲ್ಲಾ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಸೂಚನೆ ನೀಡಿದರು.ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಎಸ್ಪಿ ರಂಜಿತ್ ಕುಮಾರ್ ಬಂಡಾರು, ಜಿಲ್ಲಾ ಸ್ವೀಪ್ ಸಮಿತಿಯ ನೋಡೆಲ್ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್, ಸಹಾಯಕ ಆಯುಕ್ತ ಹೇಮಂತ್ ಕುಮಾರ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

# ಮೌಲಾನಾ ಆಜಾದ್ ಮಾದರಿ ಶಾಲೆ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಕೊಪ್ಪಳ**

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 2024–25ನೇ ಸಾಲಿಗಾಗಿ ಗಂಗಾವತಿ ತಾಲೂಕಿನ ಶ್ರೀರಾಮನಗರದ ಅಲ್ಪಸಂಖ್ಯಾತರ ಮೌಲಾನಾ ಆಜಾದ್ ಮಾದರಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ 6ನೇ ತರಗತಿಯ ಪ್ರವೇಶಕ್ಕಾಗಿ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳು 5ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಡಾ ಎ.ಪಿ.ಜೆ.ಅಬ್ದುಲ್ ಕಲಾಂ ವಸತಿ ಶಾಲೆಯಲ್ಲಿ ಶೇ.75 ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಮತ್ತು ಶೇ.25 ಇತರೆ ವರ್ಗದವರಿಗೆ ಮೀಸಲಿಡಲಾಗಿದ್ದು, ಅಲ್ಪಸಂಖ್ಯಾತರ ವರ್ಗದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ ಹಾಗೂ ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ 2.50 ಲಕ್ಷ ಮಿತಿಯೊಳಗಿರಬೇಕು. ಹಿಂದುಳಿದ ವರ್ಗಗಳ 2ಎ, 3ಎ ಮತ್ತು 3ಬಿ ಅಭ್ಯರ್ಥಿಗಳ ಹಾಗೂ ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ 2.50 ಲಕ್ಷ ಮಿತಿಯೊಳಗಿರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭ್ಯರ್ಥಿಗಳ ಕುಟುಂಬದ ವಾರ್ಷಿಕ ಆದಾಯ 2.50 ಲಕ್ಷ ಮಿತಿಯೊಳಗಿರಬೇಕು. ಅಂಗವಿಕಲ ವಿದ್ಯಾರ್ಥಿಗಳಿಗೆ ಶೇ.05, ಮಾಜಿ ಸೈನಿಕರಿಗೆ ಶೇ.04 ಕಾಯ್ದಿರಿಸಲಾಗಿದೆ. ವಿಶೇಷ ದುರ್ಬಲ ವರ್ಗ ಶೇ.05, ಸಫಾಯಿ ಕರ್ಮಚಾರಿ ವಿದ್ಯಾರ್ಥಿಗಳಿಗೆ ಶೇ.05ರಷ್ಟು ಸ್ಥಾನಗಳನ್ನು ಕಾಯ್ದಿರಿಸಲಾಗಿದೆ.

ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿದ ಅರ್ಜಿಯೊಂದಿಗೆ ಕಂದಾಯ ಇಲಾಖೆಯ ತಹಶೀಲ್ದಾರ ನೀಡಿದ ಜಾತಿ ಮತ್ತು ಆದಾಯ ದೃಢೀಕರಣ ಪ್ರಮಾಣ ಪತ್ರ, ವಾಸಸ್ಥಳ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಹಾಗೂ ವಿದ್ಯಾರ್ಥಿ ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ 4 ಭಾವಚಿತ್ರಗಳೊಂದಿಗೆ ಪೋಷಕರು ಅಥವಾ ವಿದ್ಯಾರ್ಥಿಗಳು ನೇರವಾಗಿ ಎಲ್ಲಾ ದಾಖಲೆಗಳೊಂದಿಗೆ ಶ್ರೀರಾಮನಗರ ಮೌಲಾನಾ ಆಜಾದ್ ಶಾಲೆಯ ಮುಖ್ಯೋಪಾಧ್ಯಾಯರಿಗೆ ಸಂಪರ್ಕಿಸಿ ಏಪ್ರಿಲ್ 16 ರೊಳಗೆ ಅರ್ಜಿ ಸಲ್ಲಿಸಬೇಕು. ಅಪೂರ್ಣವಾದ ಮತ್ತು ತಡವಾಗಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಮೌಲಾನಾ ಆಜಾದ್ ಮಾದರಿ ಆಂಗ್ಲ ಮಾಧ್ಯಮ ಶಾಲೆ ಶ್ರೀರಾಮನಗರ ಮೊ.ಸಂ: 9880026927 ಅಥವಾ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಕೊಪ್ಪಳ ದೂ.ಸಂ: 08539–225070 ಗೆ ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಮ್ಮ ಸೇವೆ ಮತ್ತು ಉತ್ಪನ್ನಗಳನ್ನು ಹೊಸಬರಿಗೂ ಪರಿಚಯಿಸಲು ಮತ್ತು
ಸೇವೆ ವಿಸ್ತರಿಸಲು ಬಯಸಿದ್ದೀರಾ? ಇಂದೇ ಸಂಪರ್ಕಿಸಿ : 9448633038

ವಿಜಯನಗರ ಜಿಲ್ಲೆಯ ಉದ್ದಿಮೆದಾರರಿಗೆ
ಸುವರ್ಣಾವಕಾಶ!
ಪ್ರತಿ ಭಾನುವಾರದ ಜಾಹೀರಾತು
ಜಾಹೀರಾತು ಚಿಕ್ಕದಾದರೂ
ಬ್ರ್ಯಾಂಡಿಂಗ್ ಜಗದಗಲ

SPARES & SERVICES
PORTABLE COMPRESSORS
For Portable Diesel-driven Air Compressors ranging from 160 cfm - 1350 cfm, For Electrical Air Compressors ranging from 45kW - 75kW motors
Scan to Deatils
S M TRADERS & SERVICES
M:9686663125 - 9686663132 - 9686413132
Hampi Road, Hosapete-583201 Vijayanagara Dist.

ರೈತರಿಂದ ನೇರ ಮಾರಾಟ
ಸಾವಯವ ಪದ್ಧತಿಯಲ್ಲಿ ಬೆಳೆದ ಗುಣಮಟ್ಟದ ತೆಂಗಿನಕಾಯಿ, ಬಾಳೆಹಣ್ಣು, ತಾಜಾ ನುಗ್ಗೇಕಾಯಿ ಮತ್ತು ನುಗ್ಗೆ ಸೊಪ್ಪಿಗಾಗಿ ಸಂಪರ್ಕಿಸಿ
Organic Coconut, Banana, Moringa Oleifera Available in Wholesale Best Price
M:98458 65204
Opp: Baldota Park, M.J.Nagara, Hosapete-583201 Vijayanagara Dist.

VIVĒKASRĒYĀLĀPA
VEENA INSTRUMENTAL
VOCAL - KARNATIC
AND FILM MUSIC Classes
contact for more information
M:91082 26938, 90368 65666
Near Honda Showroom, Hosapete-583201

ಮದುವೆ, ಗೃಹಪ್ರವೇಶ, ಶುಭ ಸಮಾರಂಭ, ಸಭೆ, ವಿವಿಧ ಧಾರ್ಮಿಕ ಕಾರ್ಯಕ್ರಮಗಳಿಗಾಗಿ ಭೇಟಿ ನೀಡಿ
ನೂತನವಾಗಿ ನವೀಕರಣಗೊಂಡ
ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪ
ಪಟೇಲನಗರ, ಹೊಸಪೇಟೆ, ವಿಜಯನಗರ ಜಿಲ್ಲೆ
ಸ್ವಾತಿ ಸೌಂಡ್ಸ್ & ಡೆಕೋರೇಟರ್ಸ್
M:9448261804, 9742130982

OM ENTERPRISES
Disposible Items Production & Wholesale
Available: Paper Tea Cup - Water Cup - Juice Cup - Bowl & Plate Etc.
M:94487 17137, 83109 88292
Chitrakeri, Hosapete-583201, Vijayanagara Dist.

V N Royal Garden Function Hall
Hall is a Perfect suit for a meeting, Your Son & Daughters marriage, your child's birthday party, wedding reception or a business seminar.
This a best party place located in hosapet, Vijayanagara Dist.
WE ARE OPEN
for Every Function
M:9980136034, 9880701217
Behind Meeralam Talkies, Hosapete-583201 Vijayanagara Dist.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA